## ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
★ ದೇವರು ನಮ್ಮ ಗುರು ;
ಋಷಿಗಳು ನಮ್ಮ ಮಾರ್ಗದರ್ಶಿಗಳು

# ತಪೋವಾಣಿ

ಸಂಪುಟ 18 ಸಂಚಿಕೆ 08 ಆಗಸ್ಟ್ 2021 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಜೂನ್ 2004ರ ಸಂಚಿಕೆ)

ಭಾರೀ ಮಳೆಯು ತಪ್ತ ಹೃದಯಗಳಲ್ಲಿ ಭರವಸೆಯನ್ನು ಮೂಡಿಸಿದೆ. ಮಳೆ ಮತ್ತು ಧ್ಯಾನಗಳಿಲ್ಲದೆ ಜೀವನ ಮತ್ತು ಬದುಕುಗಳಿಗೆ ಯಾವುದೇ ಭರವಸೆಗಳಿರುವುದಿಲ್ಲ.

---

ಅಮೇರಿಕದಲ್ಲಿರುವ ಭಾರತೀಯ ವೈದ್ಯರಾದ ಡಾ. ಮಾಲೂರರು ಇಲ್ಲಿನ ಕುಂಡಲಿನಿ ಗೋಪುರದಲ್ಲಿ 25 ಗಂಟೆಗಳ ಕಾಲ ಧ್ಯಾನ ಮಾಡಿದರು. ಈ ಅಸಾಮಾನ್ಯ ಸಾಧನೆಯು ನಮ್ಮ ಧ್ಯಾನಿಗಳಲ್ಲಿ ವಿಸ್ಮಯ ಮತ್ತು ಮೆಚ್ಚುಗೆಯನ್ನು ಹುಟ್ಟುಹಾಕಿತು. ಆದರೆ ಕಡಿಮೆ ಅವಧಿಯವರೆಗೂ ಕೂಡ ಯಾರೂ ಅದನ್ನು ಅನುಸರಿಸುವ ಧೈರ್ಯ ಮಾಡಲಿಲ್ಲ.

ಮೆಚ್ಚುಗೆಯು ಸಂತೃಪ್ತಿ ಮತ್ತು ಸಂತುಷ್ಟಿಯನ್ನು ತರುತ್ತದೆ. ಕೆಲವರು ಮಾತ್ರ ಈ ಮಿತಿಗಳನ್ನು ಮುರಿಯುತ್ತಾರೆ.

---

ಹಲವಾರು ಜನರು ಯಾವುದೇ ಪ್ರಾಮುಖ್ಯತೆಯಿಲ್ಲದ ಮತ್ತು ಕನಿಷ್ಠ ಪ್ರಸ್ತುತತೆಯಿರುವ ವಿವಿಧ ವಿಷಯಗಳ ಬಗ್ಗೆ ಏಕಕಾಲದಲ್ಲಿ ಮಾತನಾಡುತ್ತಿರುವಾಗ, ನಾನು ಸಂದರ್ಭಗಳು ಮತ್ತು ಬಿಡಿಸಿಕೊಳ್ಳಲಾಗದ ಸಾಮಾಜಿಕ ಬಂಧನಗಳಿಂದಾಗಿ ಅವರ ನಡುವೆ ಬಲವಂತವಾಗಿ ಕುಳಿತುಕೊಂಡು, ಇಲ್ಲಿ ನಾನೇನು ಮಾಡುತ್ತಿದ್ದೇನೆ ಎಂದು ಅಚ್ಚರಿಪಡುತ್ತೇನೆ! ನಾನು ನನ್ನ ಹುಟ್ಟು ಮತ್ತು ಈ ಸೃಷ್ಟಿಯ ಉದ್ದೇಶವನ್ನು ಪೂರೈಸುತ್ತಿರುವೆನೆ?

ಅಂತಹ ಕಬಳಿಸುವ ಸಮಯಗಳಿಂದ ನನ್ನನ್ನು ಮುಕ್ತಗೊಳಿಸಿಕೊಂಡು ನನ್ನ ಧ್ಯಾನಗಳು ಮತ್ತು ಆಧ್ಯಾತ್ಮಿಕ ಸಂಸರ್ಗದ ನನ್ನ ಪ್ರಪಂಚದಲ್ಲಿ ಬದುಕಲು ಹೆಣಗಾಡುತ್ತಿದ್ದೇನೆ. ಅದಕ್ಕಾಗಿಯೇ ನಾನು ಏಕಾಂತತೆ ಮತ್ತು ವಿವಿಕ್ತತೆಯನ್ನು ಬಯಸುತ್ತೇನೆ.

ಸೃಷ್ಟಿಯ ಉದ್ದೇಶದಿಂದ ದೂರವಿರುವುದು ನಿಧಾನವಾಗಿ ಕಡಿಮೆಯಾಗುತ್ತಿದೆ.

---

ಜ್ಞಾನಕ್ಕಿಂತ ಅನುಭವ ಮುಖ್ಯ. ನಾವು ಅಂತರಂಗದಲ್ಲಿ ಸ್ಥಿರತೆ ಮತ್ತು ಪ್ರಜ್ಞೆಯ ವಿಸ್ತರಣೆಯನ್ನು ಅನುಭವಿಸಬೇಕು. ನಾವು ದೇವರನ್ನು ಅನುಭವಿಸಬೇಕು. ಅನುಭವಿಸಲು ಧ್ಯಾನ ಮಾಡಬೇಕು. ಅನುಭವವಿಲ್ಲದೆ ನಾವು ಬೆಳೆಯುವುದಿಲ್ಲ. ಗುಡ್ಡೆ ಹಾಕಿದ ಬೌದ್ಧಿಕ ಜ್ಞಾನ ಮತ್ತು ವರ್ಷಗಳು, ನಮ್ಮ ಬದುಕಿಗೆ ವಿವೇಚನೆ ಮತ್ತು ಪ್ರೇಮವನ್ನು ಸೇರಿಸದೆ ಕೇವಲ ಅಂಕಿಅಂಶಗಳಾಗಿ ಉಳಿದಿವೆ.

ಧ್ಯಾನವು ಪ್ರಾಚೀನ ಮಾಸ್ಟರ್‌ಗಳಾದ ಋಷಿಗಳು ಮನುಕುಲಕ್ಕೆ ಕೊಟ್ಟ ಬಹು ದೊಡ್ಡ ಕೊಡುಗೆಯಾಗಿದೆ.

ಕೇವಲ ಆಧ್ಯಾತ್ಮಿಕ ಹಾದಿಯಲ್ಲೇ ಸಾಗುವವರಿಗೂ, ಯಾವುದೋ ಒಂದು ಹಂತದಲ್ಲಿ, ಅಲ್ಪ ಸಮಯದವರೆಗೆ, ಸ್ವಲ್ಪ ಮಾರ್ಗದರ್ಶನ ಮತ್ತು ಭರವಸೆಯ ಪಿಸುಮಾತುಗಳು ಬೇಕಾಗುತ್ತವೆ. ಎಲ್ಲಿಂದಲಾದರೂ ಅಥವಾ ಯಾವುದೇ ಸಮಯದಲ್ಲಿ ತನ್ನ ಬಳಿಗೆ ಬರುವ ಯಾವುದೇ ಸಾಧಕನಿಗೆ ಮಾರ್ಗದರ್ಶನ, ಸ್ಫೂರ್ತಿ ಮತ್ತು ರಕ್ಷಣೆ ನೀಡುವುದು ಗುರುವಿನ ಕೆಲಸ.

---

ದೇವರ ಅಸ್ತಿತ್ವದ ಬಗ್ಗೆ ಬಿಬಿಸಿಯಲ್ಲಿ ಚರ್ಚೆ ನಡೆಯಿತು. ಅಭಿಪ್ರಾಯ ಸಂಗ್ರಹವೂ ಇತ್ತು! ಅಂತಿಮವಾಗಿ ಬ್ರಿಟಿಷರು, ಡೇವಿಡ್ ಬೆಕ್‌ಹ್ಯಾಮ್ ದೇವರಿಗಿಂತ ಹೆಚ್ಚು ಪ್ರಭಾವಶಾಲಿ ಎಂದು ಮತ ಚಲಾಯಿಸಿದರು! ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

ಕೋವಿಡ್ ಪರಿಸ್ಥಿತಿಯ ಕಾರಣದಿಂದಾಗಿ, ಬೆಂಗಳೂರು ನಗರದ ಕೇಂದ್ರಗಳಲ್ಲಿನ ಧ್ಯಾನದ ತರಗತಿಗಳನ್ನು ಮಾರ್ಚ್ 2021ರ ವರೆಗೆ ರದ್ದುಪಡಿಸಲಾಗಿತ್ತು. ಪಿಡುಗು ಇನ್ನೂ ನಿಂತಿಲ್ಲದಿರುವುದನ್ನು ಮತ್ತು ಪರಿಸ್ಥಿತಿಯು ಇನ್ನೂ ಪೂರ್ಣವಾಗಿ ನಿಯಂತ್ರಣದಲ್ಲಿ ಇಲ್ಲದಿರುವುದನ್ನು ಪರಿಗಣಿಸುತ್ತಾ ಮುಂದಿನ ಸೂಚನೆಯವರೆಗೆ ತರಗತಿಗಳನ್ನು ತೆರೆಯಲಾಗುವುದಿಲ್ಲ. ಪರಿಸ್ಥಿತಿಯನ್ನು ಗಮನಿಸುತ್ತಿರುತ್ತೇವೆ ಮತ್ತು ತರಗತಿಗಳನ್ನು ಯಾವಾಗ ಪುನರಾರಂಭಿಸಬೇಕೆನ್ನುವುದನ್ನು ನಿರ್ಧರಿಸುತ್ತೇವೆ.

ಅಲ್ಲಿಯವರೆಗೂ ವೆಬ್‌ಕಾಸ್ಟ್ ಮೂಲಕ ಭಾನುವಾರದ ತರಗತಿಗಳು ಆನ್‌ಲೈನ್‌ನಲ್ಲಿ ಮುಂದುವರಿಯುತ್ತವೆ. ಬೇಸಿಕ್ ತರಗತಿಗಳನ್ನು ಕೂಡ, ಪ್ರತಿ ಭಾನುವಾರ ಬೆಳಿಗ್ಗೆ 10 ರಿಂದ 11ರ ವರೆಗೆ 'ಆನ್‌ಲೈನ್'ನಲ್ಲಿ ನಡೆಸಲಾಗುತ್ತಿದೆ. ಪ್ರತಿ ತಿಂಗಳಿನ ಮೊದಲನೇ ಭಾನುವಾರ ಹೊಸ ಬ್ಯಾಚ್ ಪ್ರಾರಂಭವಾಗುತ್ತದೆ.

ಹಾಗೂ, ಪ್ರತಿ ತಿಂಗಳು 3ನೇ ಭಾನುವಾರ, ಮಾರ್ಗದರ್ಶಿತ ನೇರ ಆನ್‌ಲೈನ್ ಲೈಟ್ ಚಾನಲಿಂಗ್ ಸೆಷನ್ ನಡೆಸಲಾಗುತ್ತದೆ. ಇದು ಎಲ್ಲರಿಗೂ ತೆರೆದಿರುತ್ತದೆ. ಇದಕ್ಕಾಗಿ ಕೆಳಗಿನ ಲಿಂಕ್‌ಗಳನ್ನು ಬಳಸಿಕೊಳ್ಳಿ:

https://www.lightagemasters.com/lc_live
https://www.facebook.com/lightchannels
https://youtube.com/RevolutionByLight

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/-ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಮಳೆಯು ತಪೋವನದ ಹಸಿರಿನ ಸೊಬಗನ್ನು ಹೆಚ್ಚಿಸಿದೆ

### ಸುದ್ದಿ-ಸೂಚನೆಗಳು

- ಮಹರ್ಷಿ ಅಮರರವರ ಮಹಾಸಮಾಧಿ ದಿನವನ್ನು 29 ಆಗಸ್ಟ್ 2021ರಂದು ಆಚರಿಸಲಾಗುವುದು. ಈಗಿನ ಪರಿಸ್ಥಿತಿ ಸುಧಾರಿಸಿದರೆ ಮತ್ತು ತಪೋನಗರದಲ್ಲಿ ಸಭೆ ಸೇರವುದು ಸಾಧ್ಯವಾದರೆ, ನಮ್ಮ ವಿದ್ಯಾರ್ಥಿಗಳಿಗೆ ಸಾಕಷ್ಟು ಮುಂಚಿತವಾಗಿಯೇ ತಿಳಿಸುತ್ತೇವೆ. ತಪೋನಗರದಲ್ಲಿ ಸಭೆ ಸೇರುವುದು ಸಾಧ್ಯವಾಗದಿದ್ದರೆ, ಆಗ ವಿದ್ಯಾರ್ಥಿಗಳು ಮೈಂಡ್-ಲಿಂಕ್ ಮಾಡಿಕೊಂಡು ಮತ್ತು ವೆಬ್‌ಕಾಸ್ಟ್ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದು.
- ಧ್ಯಾನ ಮಂದಿರದ (Meditation hall) ನವೀಕರಣ ಕಾರ್ಯವು ಲಾಕ್‌ಡೌನ್ ತೆರವುಗೊಂಡ ನಂತರ ಪುನಃ ಆರಂಭವಾಗಿದೆ.
- ಪರಬ್ರಹ್ಮನ ಚೈತನ್ಯಗಳನ್ನು ಪಡೆಯುವುದಕ್ಕಾಗಿ ಮತ್ತು ಚಾನಲ್ ಮಾಡುವುದಕ್ಕಾಗಿ, ವಿದ್ಯಾರ್ಥಿಗಳು ಜುಲೈ 24ರಂದು ವೆಬ್‌ಕಾಸ್ಟ್ ಮೂಲಕ ಭಾಗವಹಿಸಿ ಗುರು ಪೂರ್ಣಿಮೆಯನ್ನು ಆಚರಿಸಿದರು.

**ಶ್ರೀ ಕೃಷ್ಣ ಜನ್ಮಾಷ್ಟಮಿಯ ವಿಶೇಷ ಧ್ಯಾನದ ತಂತ್ರ**

ಒಂದು ಬೃಹದಾಕಾರದ ನೀಲಿ ಬೆಳಕಿನ ಗೋಲವನ್ನು ಊಹಿಸಿಕೊಳ್ಳಿ ಅಥವಾ ನೀಲಿ ಬೆಳಕಿನಿಂದ ಮಾಡಿದ ಶ್ರೀ ಕೃಷ್ಣನ ರೂಪವನ್ನು ಊಹಿಸಿಕೊಳ್ಳಿ. ಒಂದು ಬೆಳಕಿನ ಕಣವಾಗಿ ಈ ಗೋಲ ಅಥವಾ ಈ ರೂಪವನ್ನು ಪ್ರವೇಶಿಸಿ. ನೀವು ಶ್ರೀ ಕೃಷ್ಣನ ಒಳಗೆ ಇದ್ದೀರಿ. ಅವನ ಅನುಭವವನ್ನು ಪಡೆಯಿರಿ. ಈ ತಂತ್ರವನ್ನು ದಿನದಲ್ಲಿ ಎಷ್ಟು ಬಾರಿಯಾದರೂ, ಎಷ್ಟು ಕಾಲ ಬೇಕಾದರೂ ಅಭ್ಯಾಸ ಮಾಡಬಹುದು. ಈ ತಂತ್ರವನ್ನು ರೆಗ್ಯುಲರ್ ಧ್ಯಾನದ ಬದಲಾಗಿ ಹತ್ತು ದಿನಗಳ ಕಾಲ ಅಭ್ಯಾಸ ಮಾಡಬಹುದು.

ಭಾನುವಾರದ ತರಗತಿಗಳ ಲೈವ್ ವೆಬ್ ಕಾಸ್ಟ್ ವಿದ್ಯಾರ್ಥಿಗಳಿಗೆ ಲಭ್ಯವಿರುತ್ತದೆ. ವಿವರಗಳಿಗಾಗಿ ದಯವಿಟ್ಟು ಮಾನಸ ಕಛೇರಿಯನ್ನು ಇ-ಮೇಲ್ ಮೂಲಕ ಸಂಪರ್ಕಿಸಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಭಾನು | ಕೃಷ್ಣ ಅಷ್ಟಮಿ |
| 07 | ಶನಿ | ಮಾಸ ಶಿವರಾತ್ರಿ |
| 08 | ಭಾನು | ಅಮಾವಾಸ್ಯೆ |
| 16 | ಸೋಮ | ಶುಕ್ಲ ಅಷ್ಟಮಿ |
| 17 | ಮಂಗಳ | ಶುಕ್ಲ ದಶಮಿ |
| 20 | ಶುಕ್ರ | ಮಹಾಲಕ್ಷ್ಮಿಯ ಆರಾಧನೆ |
| 22 | ಭಾನು | ಪೂರ್ಣಿಮಾ |
| 25 | ಬುಧ | ಮಹರ್ಷಿ ಅಮರರವರ ಮಹಾಸಮಾಧಿ ದಿನ |
| 29 | ಭಾನು | ಮಹರ್ಷಿ ಅಮರರವರ ಮಹಾಸಮಾಧಿ ದಿನದ ಕಾರ್ಯಕ್ರಮ |
| 30 | ಸೋಮ | ಶ್ರೀ ಕೃಷ್ಣ ಜನ್ಮಾಷ್ಟಮಿ |

### ಈ ತಿಂಗಳು ತಪೋನಗರದಲ್ಲಿ

ಸದ್ಯದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ವರ್ಚುವಲ್ ಆಗಿ ವೆಬ್‌ಕಾಸ್ಟ್ ಮೂಲಕ ನಡೆಸಲಾಗುತ್ತಿದೆ ಮತ್ತು ಸದ್ಯಕ್ಕೆ ತಪೋನಗರದಲ್ಲಿ ಯಾವುದೇ ರೀತಿಯ ಭೌತಿಕ ಸಭೆಗಳು ಇಲ್ಲ.

| | |
|---|---|
| ಭಾನುವಾರಗಳು | : ಉಪನ್ಯಾಸಗಳು : ಬೆಳಿಗ್ಗೆ 11ರಿಂದ ಮಧ್ಯಾಹ್ನ 12<br>ಲೈಟ್ ಚಾನೆಲಿಂಗ್: ಮಧ್ಯಾಹ್ನ 12 ರಿಂದ 1ರವರೆಗೆ |
| 29-08-2021 | ಅಮರರವರ ಮಹಾಸಮಾದಿ ದಿನದ ಆಚರಣೆ: ಬೆಳಿಗ್ಗೆ 11 ರಿಂದ ಮಧ್ಯಾಹ್ನ 12-30 |
| 30-08-2021 | ಶ್ರೀ ಕೃಷ್ಣ ಜನ್ಮಾಷ್ಟಮಿ ವಿಶೇಷ ಧ್ಯಾನ: ಮಧ್ಯಾಹ್ನ 12 ರಿಂದ 1 |

### ಅಮರರವರ ಮಹಾಸಮಾಧಿ ಕಾರ್ಯಕ್ರಮ

**ಭಾನುವಾರ 29-08-2021**

ಬೆಳಿಗ್ಗೆ 11 ಸ್ವಾಗತ
ಭಾಷಣಗಳು
ವಿಶೇಷ ಧ್ಯಾನ

## ಲೈಟ್ ಚಾನಲಿಂಗ್ ಅನುಭವಗಳು ಮತ್ತು ಶಾಲೆಗಳಿಂದ ಬಂದ ಪ್ರತಿಕ್ರಿಯೆಗಳು

**ಸಂ: ವೈಶಾಲಿ ಜೋಶಿ; ಅನು: ಸುಜಾತ ವಿ**

ನಿಯತವಾಗಿ ಲೈಟ್ ಚಾನೆಲ್ ಅಭ್ಯಾಸ ಮಾಡುವುದರಿಂದ ನಮ್ಮ ಮಕ್ಕಳು ನಿರ್ಣಯ ತೆಗೆದುಕೊಳ್ಳುವುದರಲ್ಲಿ ಮತ್ತು ತಮ್ಮನ್ನು ವ್ಯವಸ್ಥೆಗೊಳಿಸಿಕೊಳ್ಳುವುದರಲ್ಲಿ ಸಹಾಯ ಮಾಡಿದೆ. ಅವರು ದಿನ ನಿತ್ಯದ ಸವಾಲುಗಳನ್ನು ನಿಭಾಯಿಸಲೂ ಶಕ್ತರಾಗಿದ್ದಾರೆ ಮತ್ತು ಸರಿಯಾದುದನ್ನು ಆಯ್ಕೆ ಮಾಡುತ್ತಾರೆ. ನಾನು ಈ ತಂತ್ರವನ್ನು ಅಭ್ಯಾಸಮಾಡುವ ಎಲ್ಲ ಅವಕಾಶಗಳನ್ನೂ ಬಳಸಿಕೊಳ್ಳುತ್ತೇನೆ. ಅದು ನಿಜವಾಗಿಯೂ ಚೆನ್ನಾಗಿದೆ.

**–ಶ್ರೀಮತಿ. ವಿದ್ಯಾ, ಶ್ರೀ ಸರಸ್ವತಿ ವಿದ್ಯಾ ಮಂದಿರ, ಚೆನ್ನಮ್ಮನಕೆರೆ ಅಚ್ಚುಕಟ್ಟು**

ಲೈಟ್ ಚಾನೆಲಿಂಗ್ ಅಭ್ಯಾಸ ಮಾಡುವುದರಿಂದ ನಾನು ಹೆಚ್ಚು ಲಾಭವನ್ನು ಪಡೆದೆ. ನಾನು ಚೆನ್ನಾಗಿ ಓದಬಲ್ಲೆ ಮತ್ತು ನನ್ನ ನೆನಪಿನ ಶಕ್ತಿಯೂ ಹೆಚ್ಚಿದೆ. ನಾನು ಕ್ರಿಯಾಶೀಲಳಾಗಿರುತ್ತೇನೆ ಮತ್ತು ಶಕ್ತಿಯುತಳಾಗಿರುತ್ತೇನೆ. ಚೆನ್ನಾಗಿ ಅನ್ನಿಸುತ್ತದೆ. ನನ್ನ ಕೋಪವು ಕಮ್ಮಿಯಾಗಿದೆ. ನಾನು ಇಂಗ್ಲೀಷ್‌ನಲ್ಲಿ ಸುಧಾರಿಸಿದ್ದೇನೆ ಮತ್ತು ಉತ್ತಮವಾಗಿ ಬರೆಯಬಲ್ಲೆ.

**–ಎಸ್. ವೇಲಮ್ಮಾಳ್, 5ನೇ ತರಗತಿ. ಸೇಂಟ್ ಜೋಸೆಫ್ ಜ್ಸೇವಿಯರ್ ಆರ್ ಸಿ ಪ್ರೈಮರಿ ಸ್ಕೂಲ್, ಕುಲಸೇಕರನ್ ಪಟ್ಟಿನಮ್**

ಲೈಟ್ ಚಾನೆಲಿಂಗ್ ಅದ್ಭುತವಾದ ಅನುಭವವಾಗಿತ್ತು. ಅದು ನನ್ನಲ್ಲಿ ಹುರುಪು ತುಂಬಿತು ಮತ್ತು ದಿನಪೂರ್ತಿ ಶಾಂತವಾಗಿರಲು ಮತ್ತು ವಿಶ್ರಾಂತಿಯಿಂದಿರಲು ಅದು ಸಹಾಯ ಮಾಡಿತು.

**–ಹರ್ಷ ಕೆ.ಪಿ., 10ನೇ ತರಗತಿ, ಎಸ್ ಬಿ ಎಸ್ ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ಚೆನ್ನೈ**

ಲೈಟ್ ಚಾನೆಲಿಂಗ್ ಮಾಡುವಾಗ ನನಗೆ ಪ್ರಶಾಂತತೆ ಮತ್ತು ಹಿತಕರವಾದ ಅನುಭವವಾಯಿತು. ಅದು ನನ್ನ ಮನಸ್ಸನ್ನು ತಾಜಾ ಮಾಡಿತು. ನನಗೆ ಶಾಂತತೆ ಮತ್ತು ಮೌನದ ಅನುಭವವಾಯಿತು.

**–ವಿಧ್ಯಾ ಎಸ್, 9ನೇ ತರಗತಿ, ಎಸ್ ಬಿ ಎಸ್ ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ಚೆನ್ನೈ**

ಲೈಟ್ ಚಾನೆಲಿಂಗ್ ಮಾಡುವಾಗ ನನ್ನ ಮನಸ್ಸು ಶಾಂತವಾಗುತ್ತದೆ. ಅದರೊಂದಿಗೆ ಸುಲಭವಾಗಿ ಸಂಪರ್ಕಗೊಳ್ಳಬಲ್ಲೆ. ಅದು ನನ್ನ ಚುರುಕುತನವನ್ನು ಉತ್ತಮಗೊಳಿಸಿದೆ.

**–ಪದ್ಮಾ ಶ್ರೀ ಎಂ., 12ನೇ ತರಗತಿ, ಎಸ್ ಬಿ ಎಸ್ ಮೂಥ ಗರ್ಲ್ಸ್ ಸೀನಿಯರ್ ಸೆಕಂಡರಿ ಸ್ಕೂಲ್, ಚೆನ್ನೈ**

ನಾನು ಪ್ರತಿ ದಿನ 7 ನಿಮಿಷಗಳ ಕಾಲ ಲೈಟ್ ಚಾನೆಲಿಂಗ್ ಅಭ್ಯಾಸ ಮಾಡುತ್ತೇನೆ. ಈಗ ನಾನು ಏಕಾಗ್ರತೆಯಿಂದ ಓದಬಲ್ಲೆ. ಸೋಮಾರಿತನ ಮತ್ತು ತೂಕಡಿಕೆ ಇಲ್ಲವಾಗಿದೆ. ನನ್ನ ತರಗತಿಯ ಪರೀಕ್ಷೆಯಲ್ಲಿ ಪೂರ್ತಿ ಅಂಕಗಳಿಸಿದ್ದೇನೆ.

**–ನಿಖಿಲ್ ಸತ್ಪುತೆ, 8ನೇ ತರಗತಿ, ವಿಶ್ವಕರ್ಮ ವಿದ್ಯಾಲಯ ಇಂಗ್ಲೀಷ್ ಸೆಕಂಡರಿ ಸ್ಕೂಲ್, ಪುಣೆ**

## ಮಹರ್ಷಿ ಅಮರ

**ವೈಶಾಲಿ ಜೋಶಿ; ಅನು: ಸುಜಾತ ವಿ**

ಮಹರ್ಷಿ ಅಮರರವರು ಈ ಭೂಮಿಯ ಮೇಲೆ ದೈಹಿಕವಾಗಿ ಬದುಕಿದ್ದಾಗ ನಮ್ಮಲ್ಲಿ ಅನೇಕರು ಹುಟ್ಟಿದ್ದಿರಬಹುದು. ಆದರೆ ಅವರನ್ನು ನಾವು ಭೇಟಿ ಮಾಡಲಾಗಲಿಲ್ಲ. ಬಹುಶಃ ನಾವು ಅದಕ್ಕೆ ಸಿದ್ಧರಾಗಿರಲಿಲ್ಲ! ಆದರೆ ಗುರೂಜಿಯವರು, ಅವರು ಸದಾ ಕಾಲ ನಮ್ಮೊಂದಿಗೆ ಇರುವಂತೆ ಅವರನ್ನು ನಮ್ಮ ಜೀವನದೊಳಕ್ಕೆ ತಂದಿದ್ದಾರೆ ಮತ್ತು ಅದರೊಂದಿಗೆ ಅವರ ಪ್ರೀತಿ, ಮಾರ್ಗದರ್ಶನ, ರಕ್ಷಣೆ ಮತ್ತು ಅನುಗ್ರಹವನ್ನೂ ತಂದಿದ್ದಾರೆ. ನಾವೆಲ್ಲರೂ ಅವರನ್ನು ಪ್ರೀತಿಸುತ್ತೇವೆ ಮತ್ತು ಅವರಿಗೆ ಅತಿ ಹತ್ತಿರವಾದಂತೆ ಅನಿಸುತ್ತದೆ.

ಅವರ ವ್ಯಕ್ತಿತ್ವದ ಮತ್ತು ಕೆಲಸದ ಆಳ ಹಾಗೂ ವೈಶಾಲ್ಯತೆಯನ್ನು ನಮ್ಮ ಸೀಮಿತವಾದ ಸಾಮರ್ಥ್ಯಗಳಿಂದ ಪೂರ್ತಿಯಾಗಿ ಗ್ರಹಿಸುವುದು ಕಷ್ಟ. ಅವರ ಜೀವನದ ಪ್ರತಿಯೊಂದು ಕ್ಷಣದಲ್ಲಿ, ನಾವು ಹೇಗೆ ಜೀವನದಲ್ಲಿ ಬದುಕಬೇಕು ಎಂಬ ಪಾಠ ಅಡಗಿದೆ – ನಮ್ರತೆಯೊಂದಿಗೆ, ಋಷಿಗಳಿಗೆ ಪೂರ್ತಿಯಾಗಿ ಶರಣಾಗತರಾಗಿ ಮತ್ತು ಋಷಿಗಳಲ್ಲಿ ನಂಬಿಕೆಯೊಂದಿಗೆ ಬದುಕುವುದು. ಈ ಭೂಮಿಯ ಮೇಲಿನ ಜೀವನ ನಡೆಸುತ್ತಾ ಮತ್ತು ಅದೇ ಸಮಯದಲ್ಲಿ ಬೇರೆ ಬೇರೆ ಆಯಾಮಗಳಲ್ಲಿ ಋಷಿಗಳ ಕೆಲಸವನ್ನು ಮಾಡುತ್ತಾ ಇವೆರಡರಲ್ಲೂ ಸಂಪೂರ್ಣ ಸಮತೋಲನ ಕಾಯ್ದುಕೊಳ್ಳುವುದು ಅವರಂತಹ ಮಾಸ್ಟರ್‌ಗಳಿಗೆ ಮಾತ್ರ ಸಾಧ್ಯ.

ಪ್ರಳಯದ ಬಗ್ಗೆ ಮಹರ್ಷಿ ಅಮರರವರು ಹೀಗೆ ಹೇಳಿದ್ದರು – "ನಿಮಗೆ ನಾಳೆ ಭೂಕಂಪ ಸಂಭವಿಸುತ್ತದೆ ಮತ್ತು ಎಲ್ಲವೂ ನಾಶವಾಗುತ್ತದೆ ಎಂದು ತಿಳಿದಿದ್ದರೂ, ನೀವು ಮನೆಯನ್ನು ನಿರ್ಮಿಸುತ್ತಿದ್ದರೆ, ನಾಳೆಯ ತನಕವೂ ನಿರ್ಮಾಣವನ್ನು ಮುಂದುವರೆಸಿ." ಅಂದರೆ, ನಮ್ಮ ಸುತ್ತಲೂ ಏನೇ ಸಂಭವಿಸುತ್ತಿದ್ದರೂ ನಾವು ಯಾವಾಗಲೂ ವಿವೇಚನಾಯುಕ್ತರಾಗಿರಬೇಕು. ಕೈಬಿಡಬಾರದು ಅಥವಾ ಭರವಸೆ ಕಳೆದುಕೊಳ್ಳಬಾರದು.

ಸತ್ಯ ಯುಗಕ್ಕೆ ಹೋಗಲು ಬೇಕಾಗಿರುವ ಪರಿವರ್ತನೆಗಳನ್ನು ಕಲ್ಕಿ ದೇವರು ಬಲಪ್ರಯೋಗದಿಂದ ತರುತ್ತಾರೆ ಮತ್ತು ಇದರಿಂದ ಯಾತನೆ ಮತ್ತು ನಷ್ಟ ಆಗಬಹುದೆಂದು ಅವರು ಹೇಳಿದ್ದರು. ಅವರು, ಮಹಾವಿಷ್ಣುವಿನ ವಿಶೇಷ ಅವತಾರವಾದ 'ಮಹಾವತಾರ' ಅವರ ಬಗ್ಗೆಯೂ ಮಾತನಾಡಿದ್ದರು. ಏನೆಂದರೆ, ಪ್ರಳಯ ಪ್ರಕ್ರಿಯೆಗಳು ಪರಮಾವಧಿಯ ಮಟ್ಟ ತಲುಪಿದಾಗ ಮತ್ತು ಅವುಗಳ ಅಂತ್ಯದ ಕಾಲ ಬಂದಾಗ, ಮಹಾವತಾರ ಈ ಭೂಮಿಯ ವ್ಯವಹಾರಗಳ ಹೊಣೆಯನ್ನು ತೆಗೆದುಕೊಳ್ಳುತ್ತಾರೆ ಮತ್ತು ಆಧ್ಯಾತ್ಮಿಕ ಸಮತೋಲನವನ್ನು ಮರುಸ್ಥಾಪಿಸುತ್ತಾರೆ. ಅವರು ಪರಬ್ರಹ್ಮನ ಚೈತನ್ಯವನ್ನು ಹೊತ್ತಿರುತ್ತಾರೆ. ಹಾಗೂ ಸತ್ಯ ಯುಗ ಬರುವುದಕ್ಕೆ ಅವರ ದೇಹದಿಂದ ಹೊರಹೊಮ್ಮುವ ಕಂಪನವೇ ಸಾಕು.

ಈಗಿನ ಗೊಂದಲದ ಸಮಯಗಳಲ್ಲಿ, ಮಹರ್ಷಿ ಅಮರರವರು ಕೊಟ್ಟಿರುವ ಜ್ಞಾನವು, ನಮಗೆ ವಿಷಯಗಳನ್ನು ಸ್ಪಷ್ಟತೆಯಿಂದ ನೋಡಲು ಶಕ್ತಿ ಮತ್ತು ವಿವೇಕವನ್ನು ಕೊಡುತ್ತದೆ, ಮತ್ತು ಅದ್ಭುತವಾದ ಭವಿಷ್ಯ ನಮಗೆ ಕಾಯುತ್ತಿದೆ ಎಂಬ ಆಶ್ವಾಸನೆ ನೀಡುತ್ತದೆ. ಅವರು ನಮಗಾಗಿ ಮಾಡುತ್ತಿರುವುದೆಲ್ಲಕ್ಕೂ ನಾವೆಲ್ಲರೂ ಅವರಿಗೆ ಕೃತಜ್ಞರಾಗಿರೋಣ. ■

## ಲೈಟ್ ಚಾನಲ್ಸ್ ವಿಶ್ವ ಸಂಚಲನ

ಇದು, ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವುದಕ್ಕಾಗಿ ಆತ್ಮಪ್ರಜ್ಞೆಯಲ್ಲಿ ನಡೆಯುವ ಒಂದು ಸಂಚಲನ. ಭಾಷಣಗಳು, ಬಾವುಟಗಳಿಲ್ಲದ, ಬೆಳಕನ್ನು ಚಾನಲ್ ಮಾಡಿದರಷ್ಟೇ ಸಾಕಾಗುವ ಒಂದು ಸಂಚಲನ. ಪದಗಳು ಮಾಡಲಾಗದ ಎಲ್ಲವನ್ನೂ ಬೆಳಕೇ ಮಾಡುತ್ತದೆ.

ನಾವು ಚಾನಲ್ ಮಾಡಿ ಬೆಳಕನ್ನು ಹರಡಿದಾಗ, ಅದು ಬೇರೆಯವರ ಹೃದಯಗಳನ್ನು ಮತ್ತು ಮನೆಗಳನ್ನು ಪ್ರವೇಶಿಸುತ್ತದೆ ಮತ್ತು ಆಲೋಚನೆಗಳು ಮತ್ತು ಭಾವನೆಗಳಲ್ಲಿರುವ ಕತ್ತಲನ್ನು ಪರಿವರ್ತಿಸುತ್ತದೆ. ವ್ಯಕ್ತಿಗಳೊಂದಿಗೆ ಪ್ರಪಂಚವೂ ಪರಿವರ್ತನೆಗೊಳ್ಳುತ್ತದೆ.

ಇದು ಭೌತಿಕ ಬೆಳಕಲ್ಲ, ಆದರೆ ಇದು, ಯಾವುದರಿಂದ ಇಡೀ ಸೃಷ್ಟಿ ಬಂದಿದೆಯೋ ಆ ಅತಿ ಸೂಕ್ಷ್ಮ ಬೆಳಕು. ಈ ಬೆಳಕಿನಲ್ಲಿ ಎಲ್ಲವೂ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ, ಆದರೆ ಎಲ್ಲಾ ಕಡೆ ಇದೆ.

ನಾವು ಪ್ರತಿದಿನ ಎದ್ದಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ಚಾನಲ್ ಮಾಡಿ ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.

ಚಾನಲ್ ಮಾಡಿ ಬೆಳಕನ್ನು ಹರಡುವುದಕ್ಕಾಗಿ, ನಿಮ್ಮ ಮೇಲೆ ಬೆಳಕಿನ ಸಾಗರವೊಂದನ್ನು ಕಲ್ಪಿಸಿಕೊಳ್ಳಿ, ನಂತರ ಈ ಸಾಗರದಿಂದ ಬೆಳಕಿನ ದಪ್ಪ ಕಿರಣವೊಂದು ಕೆಳಬಂದಂತೆ ಕಲ್ಪಿಸಿಕೊಳ್ಳಿ. ಈ ಬೆಳಕು ನಿಮ್ಮನ್ನು ಪ್ರವೇಶಿಸಿ ನಿಮ್ಮ ದೇಹವನ್ನು ಸಂಪೂರ್ಣವಾಗಿ ತುಂಬುತ್ತಿದೆಯೆಂದು ಕಲ್ಪಿಸಿಕೊಳ್ಳಿ, ಒಂದು ನಿಮಿಷ ಈ ಬೆಳಕನ್ನು ಅನುಭವಿಸಿ. ನಂತರ ಈ ಬೆಳಕು ನಿಮ್ಮ ದೇಹದಿಂದ ಹೊರಬಂದು ನಿಧಾನವಾಗಿ ಸುತ್ತಲೂ ಹರಡುತ್ತಾ, ನಿಮ್ಮ ಮನೆ, ಪ್ರದೇಶ, ದೇಶ ಮತ್ತು ಇಡೀ ಪ್ರಪಂಚವನ್ನು ತುಂಬುತ್ತಿದೆ ಎಂದು ಕಲ್ಪಿಸಿಕೊಳ್ಳಿ.

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರವರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಎಲ್ಲರಿಗೂ ಹರಡಿ.

www.lightchannels.comಗೆ ಭೇಟಿ ನೀಡಿ.

## ಶಂಬಲದ ನಿಯಮಗಳು

**ಈ ಏಳು ನಿಯಮಗಳನ್ನು ಶಂಬಲದಲ್ಲಿ ವಾಸಿಸುತ್ತಿರುವ ಜನರು ಅಭ್ಯಾಸ ಮಾಡುತ್ತಾರೆ. ಅವರು ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವನದಲ್ಲಿಯೇ ಬದುಕುತ್ತಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ನಂತರ ಅವುಗಳನ್ನು ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ನಕಾರಾತ್ಮಕತೆಗಳನ್ನು ಗೆಲ್ಲಲು ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಸಿದ್ಧಗೊಳಿಸುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

## ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಜಾತ ವಿ

ಆಗಸ್ಟ್ 2006

ನಮಗೆ ಕೆಲವೊಂದು ಸತ್ಯಗಳು ತುಂಬಾ ಸುಲಭವಾಗಿ ಕಾಣಿಸುತ್ತವೆ, ಮತ್ತು ನಾವು ಅವುಗಳನ್ನು ಸುಲಭವಾಗಿ ಒಪ್ಪಿಕೊಳ್ಳುತ್ತೇವೆ, ಆದರೆ ಬೇರೆಯವರಿಗೆ ಅದು ಬಹಳ ಕಷ್ಟವಾಗಿರುತ್ತದೆ. ಒಂದು ರೀತಿಯ ಆಧ್ಯಾತ್ಮಿಕ ಬುದ್ಧಿವಂತಿಕೆ ಇದೆ, ಅದನ್ನು ಪಡೆಯುವುದು ಅಷ್ಟೊಂದು ಸುಲಭವಲ್ಲ. ಅದಕ್ಕೆ ಜೀವಿತಾವಧಿಗಳ ಸಾಧನೆ ಬೇಕಾಗುತ್ತದೆ. ಹಾಗಾಗಿ ನಾವು ಹಳೇ ಪದಗಳನ್ನು ಬಳಸಬೇಕು, ಹೊಸದನ್ನು ಅರ್ಥಮಾಡಿಕೊಳ್ಳುವ ತನಕ. ಕೆಲವು ಪದಗಳನ್ನು ನಾನು ಉಲ್ಲೇಖಿಸುತ್ತೇನೆ...

ದಿ ನ್ಯೂ ಏಜ್ (ಹೊಸ ಯುಗ): ನಾವು ಇದನ್ನು ಬೆಳಕಿನ ಕಾಲವೆಂದು ಹೇಳಬಹುದು. ಕಲಿಯುಗವನ್ನು ಕತ್ತಲ ಕಾಲವೆಂದು ಕರೆಯಲಾಗಿತ್ತು ಮತ್ತು ಅದರ ಮುಂದಿನ ಕಾಲವನ್ನು ಬೆಳಕಿನ ಕಾಲವೆಂದು ಕರೆಯಲು ಸೂಕ್ತವಾಗಿದೆ.

ಋಷಿ: ನಾವು ಈ ಪದವನ್ನು ಬಳಸಿದಾಗಲೆಲ್ಲ, ಪುರಾಣಗಳಲ್ಲಿ ಮಾತ್ರ ಅವರಿದ್ದರೆಂದು ಯೋಚನೆ ಮಾಡುತ್ತೇವೆ. ಅವರು 'ಲೈಟ್ ಬೀಯಿಂಗ್ಸ್' (ಬೆಳಕಿನ ಜೀವಿಗಳು). ನಾವು ಆರಂಭದಲ್ಲಿ ಆಂಗ್ಲ ಪದಗಳನ್ನು ಬಳಸಬೇಕು ಇಲ್ಲವಾದರೆ ಅದನ್ನು ಜನರು ಹಿಂದುಗಳ ಪರಿಕಲ್ಪನೆ ಎಂದು ಪರಿಗಣಿಸುತ್ತಾರೆ.

ಲೈಟ್ (ಬೆಳಕು): ಅತ್ಯುನ್ನತ ವಿವೇಕ ಮತ್ತು ಎಲ್ಲವನ್ನೂ ಒಳಗೊಂಡಿರುವ ಪ್ರೀತಿಯನ್ನು ಹೊಂದಿರುವ ವಿಶ್ವಾತ್ಮಕ ಬುದ್ಧಿಶಕ್ತಿಯೇ ಬೆಳಕು. ಅದು ಪರಿಪೂರ್ಣವಾಗಿರುತ್ತದೆ. ಅದು ಎಲ್ಲ ಜ್ಞಾನ ಮತ್ತು ಶಕ್ತಿ ಹೊಂದಿರುತ್ತದೆ. ನಾವು ಬೆಳಕನ್ನು ಪೂರ್ತಿಯಾಗಿ ವರ್ಣಿಸಲಾಗುವುದಿಲ್ಲ. ಬೆಳಕೇ ದೇವರು. ಪ್ರಾಸಂಗಿಕವಾಗಿ, ವಿಶ್ವಾಮಿತ್ರ ಮಹರ್ಷಿಯವರನ್ನು ಅಮರರವರು "ಲೈಟ್" ಎಂದು ಕರೆಯುತ್ತಿದ್ದುದು ನನಗೆ ನೆನಪಿದೆ. ಪುನಃ ಪ್ರಾಸಂಗಿಕವಾಗಿ, ಯೇಸುಕ್ರಿಸ್ತರನ್ನು ಬೆಳಕು ಎಂದು ಉಲ್ಲೇಖಿಸುತ್ತಾರೆ. ನಾನು ಮುಂಚೆ ದೇವರನ್ನು ಬೆಳಕು ಎಂದು ಕರೆಯುತ್ತಿದ್ದೆ. ನಮಗೆ, ವಿಶ್ವಾಮಿತ್ರ ಮಹರ್ಷಿಯವರಿಗೂ ಹಾಗೂ ದೇವರಿಗೂ ಯಾವುದೇ ವ್ಯತ್ಯಾಸವಿಲ್ಲ. ಅವರದು ಅಂತಹ ಮಹಾನ್ ವ್ಯಕ್ತಿತ್ವ, ಈ ಇಡೀ ಸೃಷ್ಟಿಯಲ್ಲಿಯೇ ಅನನ್ಯ.

ಆಶ್ರಮ: ನಾನು 'ಸಮುದಾಯ' ಎಂಬ ಪದವನ್ನು ಬಳಸಲು ಇಷ್ಟಪಡುತ್ತೇನೆ, ಅಥವಾ ಬಹುಶಃ 'ಸ್ಯಾಂಕ್ಚುಯರಿ' (sanctuary) ಆಗಬಹುದು. ಒಂದು ಸ್ಥಳ ಅನ್ನುವುದಕ್ಕಿಂತ ಆಶ್ರಮವನ್ನು ಒಂದು ವಿಸ್ತಾರಗೊಂಡ ಸ್ಥಿತಿ ಎಂದು ವರ್ಣಿಸಲು ಇಚ್ಛಿಸುತ್ತೇನೆ. ಆಶ್ರಮದಲ್ಲಿ ಇರುವ ವ್ಯಕ್ತಿಯು ಎಲ್ಲ ರೀತಿಯಲ್ಲೂ ವಿಸ್ತಾರಗೊಂಡಿರುತ್ತಾನೆ, ಬೌದ್ಧಿಕವಾಗಿ, ಭಾವನಾತ್ಮಕವಾಗಿ, ಆಧ್ಯಾತ್ಮಿಕವಾಗಿ, ವಿಶ್ವದ ಎಲ್ಲೆಯವರೆಗೂ, ಆಶ್ರಮದಲ್ಲಿರುವ ವ್ಯಕ್ತಿ ವಿಸ್ತಾರಗೊಂಡಿರುತ್ತಾನೆ. ಈ ಸ್ಥಿತಿಯೇ ಆಶ್ರಮ, ಒಂದು ಸ್ಥಳವಲ್ಲ.

ಸಂನ್ಯಾಸಿ: ಪರಿಪೂರ್ಣ ವ್ಯಕ್ತಿ. ನಾನು ಇದನ್ನು ಬಹಳ ಸಾರಿ ವಿವರಿಸಿದ್ದೇನೆ. ನಾನು ಇದರ ವಿವರಣೆಗೆ ಹೋಗುವುದಿಲ್ಲ. ಸಂನ್ಯಾಸಿಯು ಮದುವೆಯಾದ ವ್ಯಕ್ತಿ ಆಗಿರಬಹುದು. ನನ್ನ ಗುರು ಅಮರರವರು ಸಂನ್ಯಾಸಿಗೆ ಉತ್ತಮವಾದ ಉದಾಹರಣೆ.

ಮಾಂಕ್: ನಾನು ಈ ಪದವನ್ನು ಬಳಸಿದಾಗಳೆಲ್ಲ ಜನರು ಭಯ ಪಡುತ್ತಿದ್ದರು. ಯಾರು ತನ್ನ ಜೀವನವನ್ನು ಬೆಳಕಿನ ಕಾರ್ಯಕ್ಕೆ ಮುಡಿಪಾಗಿಟ್ಟಿರುತ್ತಾನೆಯೋ ಅವನೇ ಮಾಂಕ್. ಮಾಂಕ್ ಮದುವೆಯಾದ ವ್ಯಕ್ತಿ ಆಗಿರಬಹುದು.

ಡಿಟ್ಯಾಚ್‌ಮೆಂಟ್ (Detachment): ಇಲ್ಲಿ ಎಷ್ಟೊಂದು ಅಪಾರ್ಥವಿದೆ. ನಾವು ಇಂತಹ ಪದಗಳನ್ನು ಇನ್ನುಮುಂದೆ ಬಳಸಬಾರದು. ಡಿಟ್ಯಾಚ್‌ಮೆಂಟ್ ಅಭ್ಯಾಸ ಮಾಡಬೇಕೆಂದರೆ ಎಲ್ಲದರಿಂದಲೂ ಬೇರ್ಪಡಬೇಕೆಂದು ಜನರು ಯೋಚಿಸುತ್ತಾರೆ. ವಿಶೇಷವಾಗಿ, ನಮ್ಮಲ್ಲಿ ಸೇರಿರುವ ಜನರು, ಈ ಪ್ರಪಂಚವನ್ನು ಬಿಡಬೇಕಾಗಿಲ್ಲ. ಅವರು ತಮ್ಮ ಸಂಸಾರದಿಂದ ದೂರವಾಗಬೇಕಾಗಿಲ್ಲ. ಡಿಟ್ಯಾಚ್‌ಮೆಂಟ್ ಎಂದರೆ ನಮ್ಮ ಆದ್ಯತೆಯನ್ನು ಉನ್ನತ ಮಟ್ಟಕ್ಕೆ ಏರಿಸುವುದು ಎಂದು ಋಷಿಗಳು ಸುಂದರವಾಗಿ ವರ್ಣಿಸಿದ್ದಾರೆ. ನಮ್ಮ ಆದ್ಯತೆ ಕೆಲಸ ಆಗಿದ್ದರೆ, ಬೇರೆಲ್ಲವೂ ಕಡಿಮೆ ಆದ್ಯತೆಯದಾಗುತ್ತವೆ. ನೆನಪಿರಲಿ ಯಾವುದನ್ನೂ ನಿರ್ಲಕ್ಷ್ಯ ಮಾಡಬಾರದು, ಯಾಕೆಂದರೆ ಅದು ಕೂಡ ಆದ್ಯತೆಯೇ. ಯಾರೊಬ್ಬರೂ ಸದಾಕಾಲ ಬೇರ್ಪಟ್ಟಿರುವುದಿಲ್ಲ. ಡಿಟ್ಯಾಚ್‌ಮೆಂಟ್, ನಾವು ಉನ್ನತವಾದ ಗುರಿಯನ್ನು ಹೊಂದುವುದಕ್ಕಾಗಿ, ಅಷ್ಟೆ. ನಮ್ಮ ಸಂಬಂಧಿಕರನ್ನು ನಾವು ಮನೆಗೆ ಕರೆಯ ಬಹುದು. ನಾವು ಹೋಗಿ ಅವರನ್ನು ಭೇಟಿ ಮಾಡಬಹುದು. ಹಿಂದಿನ ಕಾಲದ ಅರ್ಥದಂತೆ ನಾವು ಸಂನ್ಯಾಸಿಗಳಲ್ಲ.

ಮುಂದಿನ ಧರ್ಮ 'ಧರ್ಮವಿಲ್ಲದ್ದು' (no religion). ಅದು ವಿಶ್ವಾತ್ಮಕತೆ (ಯೂನಿವರ್ಸಲಿಸಂ). ನನಗೆ ಇದಕ್ಕಿಂತ ಉತ್ತಮವಾದ ಪದ ಕಾಣುತ್ತಿಲ್ಲ. ಈ ವಿಶ್ವಾತ್ಮಕತೆಯು ಪ್ರೀತಿ ಮತ್ತು ಸತ್ಯದ ಮೇಲೆ ಆಧಾರಿತವಾಗಿದೆ. ಸತ್ಯದ ಮೇಲೆ ಆಧಾರಿತವಾಗಿರದಿರುವುದು ಏನಾದರೂ ಇದ್ದರೆ, ಅದು ಅಲ್ಲಿ ಉಳಿಯುವುದಿಲ್ಲ. ಅದು ಕುಸಿಯುತ್ತದೆ. ಸತ್ಯದ ಆಧಾರದ ಮೇಲೆ ಇದ್ದರೆ, ಅದು ಶಾಶ್ವತವಾಗಿ ಉಳಿಯುತ್ತದೆ. ಒಂದೇ ಒಂದು ಸುಳ್ಳು ವ್ಯಕ್ತಿಯನ್ನು ಉನ್ನತ ಆಧ್ಯಾತ್ಮಿಕ ಎತ್ತರದಿಂದ ಕೆಳಗೆ ತಂದಿರುವುದನ್ನು ನಾನು ನೋಡಿದ್ದೇನೆ. ಸತ್ಯ ಅಷ್ಟೊಂದು ಮುಖ್ಯ. ನಾವು ಸತ್ಯವನ್ನು ಆಚರಿಸಬೇಕು. ನಮ್ಮ ಜೀವನದ ಎಲ್ಲ ಚಟುವಟಿಕೆಗಳು ಸತ್ಯದ ಮೇಲೆ ಆಧಾರಿತವಾಗಿರಬೇಕು. ನಮ್ಮ ಮುಂದಿನ ಧರ್ಮವು ಪ್ರೀತಿ ಮತ್ತು ಸತ್ಯದ ಆಧಾರಿತವಾಗಿರುವ ಯೂನಿವರ್ಸಲಿಸಂ ಆಗಿರುತ್ತದೆ. ಧರ್ಮ ಎಂದರೇನು? ಅದು ನಾವು ಬದುಕುವ ರೀತಿ.

ಅದು ಹೇಗೋ ಈ ವಿಷಯಗಳು ಬಹಳ ಸ್ಪಷ್ಟವಾದ ತಿಳುವಳಿಕೆಯನ್ನು ತಂದುಕೊಡುತ್ತದೆ ಮತ್ತು ತಪ್ಪುಗ್ರಹಿಕೆಗಳನ್ನು ತೆಗೆದುಹಾಕುತ್ತದೆ. ಕೆಲಸ ಮಾಡುವುದನ್ನು ಆಯ್ಕೆ ಮಾಡಿಕೊಂಡಿರುವ ಜನರು, ಸಂಸಾರದ, ಸಮಾಜದ, ಪ್ರಪಂಚದ, ಸಂಪರ್ಕವನ್ನು ಕಡಿದುಕೊಳ್ಳಬೇಕಾಗಿಲ್ಲ. ನಾನು ನನ್ನ ಗುರುವನ್ನು ಸೇರಿದಾಗ, ನಾವು ಪ್ರತ್ಯೇಕವಾಗಿ ಜೀವಿಸಬೇಕೆಂದು ಯೋಚಿಸಿದ್ದೆ ಮತ್ತು ವಾರ್ತಪತ್ರಿಕೆಯನ್ನು ಓದಬಹುದಾ ಎಂದು ಕೇಳಿದ್ದೆ. ಅವರು ನಮಗೆ ಇನ್ನೂ ಹೆಚ್ಚು ಓದಲು ಹೇಳಿದರು! ಈ ಪ್ರಪಂಚದಾದ್ಯಂತ ಏನಾಗುತ್ತಿದೆ ಎಂದು ನಮಗೆ ತಿಳಿದಿರಬೇಕು. ನಾವು ಬೆಳಕಿನ ಕೆಲಸವನ್ನು ಆಯ್ಕೆ ಮಾಡಿದಾಗ, ನಾವು ದೊಡ್ಡ ಸಂಸಾರವನ್ನು ಪ್ರವೇಶಿಸುತ್ತೇವೆ, ಅಷ್ಟೆ ಮತ್ತು ಆ ದೊಡ್ಡ ಸಂಸಾರದಲ್ಲಿ, ನಮ್ಮ ಸಂಸಾರವೂ ಸೇರಿರುತ್ತದೆ. ನಾವು ಸಂಸಾರದ ಕಾಳಜಿಯನ್ನು ನಿರ್ಲಕ್ಷಿಸದೆ ಹಾಗೆಯೇ ಉಳಿಸಿಕೊಳ್ಳಬೇಕು. ನಾವು ಸಂಸಾರದ ಸಮಸ್ಯೆಗಳನ್ನು ಎದುರಿಸಬೇಕು. ಅಲ್ಲಿ ಏನಾದರೂ ಚಿಕ್ಕ ತೊಂದರೆಯಿದ್ದರೂ, ನಾವು ಸಹಾಯ ಮಾಡಲು ಮುನ್ನುಗ್ಗಬೇಕು. ನೀವು ಇಲ್ಲಿ ಇರುವುದರಿಂದ ಇವುಗಳ ಜವಾಬ್ದಾರಿಗಳಿಂದ ಮುಕ್ತರಾಗಿದ್ದೀವೆಂದು ತಿಳಿಯಬೇಡಿ. ಮದುವೆ ಮಾಡಿಕೊಳ್ಳಬಾರದೆಂಬ ಷರತ್ತು ಕೂಡಾ ಇರುವುದಿಲ್ಲ. ಜನರು ಮದುವೆ ಮಾಡಿಕೊಳ್ಳಬಹುದು. ಮದುವೆ ಮಾಡಿಕೊಳ್ಳದಿರುವುದು ಸಂಪೂರ್ಣವಾಗಿ ವೈಯಕ್ತಿಕ ಆಯ್ಕೆಯಾಗಿರುತ್ತದೆ. ವ್ಯಾವಹಾರಿಕ ಕಷ್ಟಗಳು ಇರುತ್ತದೆ. ನಮ್ಮ ಮೊದಲ ಆದ್ಯತೆ ಕೆಲಸವಾಗಿರುತ್ತದೆ.

ಎಲ್ಲ ಸಂಬಂಧಗಳು ಪ್ರೀತಿ, ಪರಸ್ಪರ ಗೌರವ ಮತ್ತು ಪರಸ್ಪರ ವಿಶ್ವಾಸದ ಮೇಲೆ ಆಧಾರಿತವಾಗಿವೆ. ಅವುಗಳು ಬಹಳ ಮುಖ್ಯ. ನಮ್ಮಲ್ಲಿ ಗೌರವವಿದ್ದರೆ, ಇನ್ನೊಬ್ಬ ವ್ಯಕ್ತಿಯನ್ನು ಅರ್ಥಮಾಡಿಕೊಳ್ಳುತ್ತೇವೆ ಮತ್ತು ಅವನ ಕಷ್ಟಗಳನ್ನು ಕೂಡ. ಸ್ವಾತಂತ್ರ್ಯವು ನಮ್ಮ ಜೀವನದ ಒಂದು ಭಾಗ. ಸ್ವಾತಂತ್ರ್ಯವಿಲ್ಲದೆ ಬೆಳವಣಿಗೆ ಇರುವುದಿಲ್ಲ. ಒಪ್ಪದಿರುವುದಕ್ಕೆ ಸ್ವಾತಂತ್ರ್ಯವಿರಬೇಕು, ತಿರಸ್ಕರಿಸುವುದಕ್ಕೆ ಸ್ವಾತಂತ್ರ್ಯವಿರಬೇಕು. ತಿಳುವಳಿಕೆಯುಳ್ಳ ಜನರು, ಅನಾವಶ್ಯಕವಾಗಿ ವಾದಕ್ಕೆ ಇಳಿಯುವುದಿಲ್ಲ. ನಾವು ಚರ್ಚಿಸಬಹುದು ಆದರೆ ಎಂದಿಗೂ ಜಗಳವಾಡುವುದಿಲ್ಲ. ಅಸಮ್ಮತಿಯನ್ನು ಸೂಚಿಸುವುದಕ್ಕೂ ಸ್ವಾತಂತ್ರ್ಯವಿರಬೇಕು. ಇದು ಸಂಪೂರ್ಣವಾಗಿ ಅಗತ್ಯ. ನಾನು ಸ್ವಾತಂತ್ರ್ಯದಲ್ಲಿ ನಂಬಿಕೆಯಿಟ್ಟಿದ್ದೇನೆ. ■

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಕಾಂಚನಲತಾ

13-06-2021

ಹೀಲಿಂಗ್ ಬಗ್ಗೆ ನಾನು ಮಾತನಾಡುತ್ತೇನೆ ಎಂದು ಹೇಳಿದ್ದೆ. ನಾವು ಇಲ್ಲಿ ಅರ್ಥ ಮಾಡಿಕೊಂಡಂತೆ, ಹೀಲಿಂಗ್ ಒಂದು ಅತ್ಯಂತ ಶ್ರೇಷ್ಠವಾದ ಬೇಷರತ್ತಿನ ಪ್ರೀತಿಯ ಕ್ರಿಯೆ. ಋಷಿಗಳು ನಮ್ಮ ಬಗ್ಗೆ ಹೊಂದಿರುವ ಬೇಷರತ್ತಿನ ಪ್ರೀತಿಯಿಂದಾಗಿ, ಅವರು ನಮಗೆ ಸಹಾಯ ಮಾಡಲು ಹೀಲಿಂಗ್ ಚೈತನ್ಯಗಳನ್ನು ಸಂಗ್ರಹಿಸಿದ್ದಾರೆ. ಅವರು ವಿವಿಧ ರೀತಿಯ ಹೀಲಿಂಗ್ ಚೈತನ್ಯಗಳನ್ನು ಶೇಖರಿಸಿಟ್ಟಿದ್ದಾರೆ ಮತ್ತು ಆ ಚೈತನ್ಯಗಳು ಸಂತೋಷಿ ದೇವಿಯ ಸ್ವಾಧೀನದಲ್ಲಿವೆ. ತಪೋನಗರದಲ್ಲಿ, ಭೂಮಿಯ ಕೆಳಗೆ ಇರುವ ಆಸ್ಟ್ರಲ್ ಕೋಣೆಗಳಲ್ಲಿ ಬೇರೆ ಬೇರೆ ವಿಧವಾದ ಹೀಲಿಂಗ್ ಚೈತನ್ಯಗಳನ್ನು ಶೇಖರಿಸಿಡಲಾಗಿದೆ ಎಂದು ಗುರೂಜಿಯವರು ನಮಗೆ ಹೇಳುತ್ತಿದ್ದರು. ಹೀಲಿಂಗ್ ಚೈತನ್ಯಗಳ ಅಗತ್ಯ ಇರುವ ವ್ಯಕ್ತಿಗಳಿಗೆ ನಾವು ಹೀಲಿಂಗ್ ಚೈತನ್ಯಗಳನ್ನು ಕಳುಹಿಸಿದಾಗಲೆಲ್ಲಾ, ನಾವು ಒಂದು ಮಧ್ಯವರ್ತಿ ಅಥವಾ ಒಂದು ಚಾನೆಲ್ ಆಗುತ್ತೇವೆ, ಆದರೆ ಆ ಚೈತನ್ಯಗಳು ವಾಸ್ತವದಲ್ಲಿ, ದೇವಿ ಸಂತೋಷಿ ಕಳುಹಿಸಿದ್ದಾಗಿರುತ್ತದೆ. ಯಾವ ವ್ಯಕ್ತಿಗೆ ಯಾವ ರೀತಿಯ ಚೈತನ್ಯ ಮತ್ತು ಅದು ಎಷ್ಟು ಪ್ರಮಾಣದಲ್ಲಿರಬೇಕು ಎಂಬುದು ಆಕೆಗೆ ನಿಖರವಾಗಿ ತಿಳಿದಿರುತ್ತದೆ. ನಾವು ಹೀಲಿಂಗ್ ಪ್ರಕ್ರಿಯೆಯಲ್ಲಿ ತೊಡಗಿದ್ದರೂ ಕೂಡ, ಅದರ ವಿವರಗಳು ನಮಗೆ ತಿಳಿದಿರುವುದಿಲ್ಲ. ನಮ್ಮ ಕೊಡುಗೆ ಮುಖ್ಯವಾದುದೇ ಆದರೂ, ಸೀಮಿತವಾದುದು. ಸಂಪೂರ್ಣ ಪ್ರಕ್ರಿಯೆಯನ್ನು ವಾಸ್ತವದಲ್ಲಿ ಆಕೆಯೇ ನಿರ್ವಹಿಸುತ್ತಾಳೆ. ಋಷಿಗಳು ಪರಿವೀಕ್ಷಿಸುತ್ತಿರುತ್ತಾರೆ ಮತ್ತು ಆಕೆ ಋಷಿಗಳೊಂದಿಗೆ ಸಮಾಲೋಚನೆ ಮಾಡುತ್ತಾಳೆ. ನಾವು ಅದರ ಬಗ್ಗೆ ಆಲೋಚಿಸಿದರೆ, ಅದೆಂತಹ ಸುಂದರವಾದ ಪ್ರಕ್ರಿಯೆ. ಋಷಿಗಳು ನಮಗಾಗಿ ಎಷ್ಟೊಂದು ಪ್ರೀತಿ ಮತ್ತು ಕಾಳಜಿಯನ್ನು ತೋರುತ್ತಾರೆ. ಇತರರಿಗೆ ಹೀಲಿಂಗ್ ಚೈತನ್ಯಗಳನ್ನು ಕಳಿಸುವುದರಲ್ಲಿ ನಾವು ತೊಡಗಿರುವುದು ಕೂಡ ಒಂದು ಪ್ರೀತಿಯ ಕ್ರಿಯೆ.

ಹೀಲಿಂಗ್ ಹೇಗೆ ಕೆಲಸ ಮಾಡುತ್ತದೆ? ಅದು ಹಲವಾರು ರೀತಿಯಲ್ಲಿ ಕೆಲಸ ಮಾಡುತ್ತದೆ. ಅದು ಕೇವಲ ಒಂದು ವ್ಯಕ್ತಿಗೆ ಔಷಧಿ ನೀಡಿ, ಗುಣ ಪಡಿಸುವ ಏಕೈಕ ಪ್ರಕ್ರಿಯೆಯ ರೀತಿ ಅಲ್ಲ. ಅಲ್ಲಿ ಬಹು ವಿಧವಾದ ಪ್ರಕ್ರಿಯೆಗಳು ಅಡಕವಾಗಿರುತ್ತವೆ. ಯಾವುದೇ ಅನಾರೋಗ್ಯಕ್ಕೆ ಆಧ್ಯಾತ್ಮದ ಮೂಲ ಕಾರಣ ಇರುತ್ತದೆ. ಕರ್ಮಗಳು ಅನಾರೋಗ್ಯವಾಗಿ ಪ್ರಕಟಗೊಳ್ಳುತ್ತವೆ ಎಂದು ಸಾಮಾನ್ಯವಾಗಿ ನಾವು ಹೇಳುತ್ತೇವೆ. ಕೆಲವೊಮ್ಮೆ ಇದು ದೈಹಿಕವಾದುದು ಮಾತ್ರವೇ ಆಗಿರಬಹುದು; ಋತುಕಾಲಿಕ ಅನಾರೋಗ್ಯದ ರೀತಿಯದ್ದಾಗಿರಬಹುದು. ನಾವು ಅಂಥವುಗಳ ಬಗ್ಗೆ ಮಾತನಾಡುತ್ತಿಲ್ಲ. ನಾವು, ಕರ್ಮಗಳ ಕಾರಣದಿಂದ ಉಂಟಾಗುವ ಕೆಲವೊಂದು ಗಂಭೀರ ಸ್ವರೂಪದ ಅನಾರೋಗ್ಯದ ಬಗ್ಗೆ ಮಾತನಾಡುತ್ತಿದ್ದೇವೆ.

ಯಾವುದೇ ಅನಾರೋಗ್ಯವೂ ಅದರ ಚೈತನ್ಯವನ್ನು ಹೊಂದಿರುತ್ತದೆ. ಚೈತನ್ಯಗಳ ಅಸಮತೋಲನದಿಂದ ನಮಗೆ ಅನಾರೋಗ್ಯ ಉಂಟಾಗುತ್ತದೆ ಎಂದು ಗುರೂಜಿಯವರು ಹೇಳಿದ್ದರು. ಅನಾರೋಗ್ಯದ ಚೈತನ್ಯಗಳು ನಮ್ಮ ಶಾರೀರಿಕ ವ್ಯವಸ್ಥೆಯ ಚೈತನ್ಯಗಳ ಸಮತೋಲನವನ್ನು ಏರುಪೇರು ಮಾಡುತ್ತವೆ. ನಾವು ಹೀಲಿಂಗ್ ಚೈತನ್ಯಗಳನ್ನು ಕಳುಹಿಸಿದಾಗ, ಈ ಚೈತನ್ಯಗಳು ಅನಾರೋಗ್ಯದ ಚೈತನ್ಯಗಳನ್ನು ಪರಿವರ್ತನೆ ಮಾಡುತ್ತವೆ, ಆ ರೀತಿ ನಮಗೆ ಉಪಶಮನ ನೀಡಲಾಗುತ್ತದೆ.

ವ್ಯಕ್ತಿಯು ಹೀಲಿಂಗ್ ಚೈತನ್ಯಗಳನ್ನು ಸ್ವೀಕರಿಸುವ ಮೊದಲು, ಆ ಚೈತನ್ಯಗಳು, ಹೀಲಿಂಗ್ ಮಾಡಲು ಆ ವ್ಯಕ್ತಿಯನ್ನು ಪ್ರವೇಶಿಸಲು ಅವನಿಂದ ಅನುಮತಿ ಕೋರುತ್ತವೆ. ಆ ವ್ಯಕ್ತಿಯು ಚೈತನ್ಯಗಳನ್ನು ತಿರಸ್ಕರಿಸಬಹುದು ಅಥವಾ ಸ್ವೀಕರಿಸಬಹುದು. ವ್ಯಕ್ತಿಯು ಚೈತನ್ಯಗಳನ್ನು ಪಡೆಯಲು ಒಪ್ಪಿಕೊಳ್ಳದಿದ್ದರೆ, ಆಗ ಆ ಪ್ರಕ್ರಿಯೆಯು ಅಲ್ಲಿಗೇ ಕೊನೆಯಾಗುತ್ತದೆ. ಆದರೆ, ವ್ಯಕ್ತಿಯು ಚೈತನ್ಯಗಳನ್ನು ಒಪ್ಪಿಕೊಂಡರೆ, ಅವು ಚೈತನ್ಯಗಳಲ್ಲಿನ ಅಸಮತೋಲನವನ್ನು ತೆಗೆದುಹಾಕುತ್ತವೆ ಮತ್ತು ಅವು ವ್ಯಕ್ತಿಗೆ ಉಪಶಮನ ನೀಡುತ್ತವೆ. ಉಪಶಮನ ನೀಡುವುದಕ್ಕಾಗಿ ಚೈತನ್ಯಗಳಲ್ಲಿನ ಅಸಮತೋಲನವನ್ನು ಸರಿಪಡಿಸಬಹುದು. ಆದರೆ, ಈ ಅಸಮತೋಲನವನ್ನು ಶಾಶ್ವತವಾಗಿ ತೆಗೆದುಹಾಕಲು, ಆ ವ್ಯಕ್ತಿಯೇ ಆಧ್ಯಾತ್ಮಿಕವಾಗಿ ಬೆಳೆಯಲು ಪ್ರಯತ್ನ ಮಾಡಬೇಕು. ಚೈತನ್ಯಗಳು, ದೇವರು, ದೇವಿ ಸಂತೋಷಿ ಮತ್ತು ಋಷಿಗಳು ಉಪಶಮನ ನೀಡಬಲ್ಲರು, ಅವರು ಮಾರ್ಗದರ್ಶನ ನೀಡಬಲ್ಲರು, ನಿರ್ದೇಶನ ನೀಡಬಲ್ಲರು ಆದರೆ ಆ ನಂತರ ಆ ವ್ಯಕ್ತಿಯೇ ಮುಂದಿನ ಕೆಲಸಗಳನ್ನು ಮಾಡಬೇಕು. ಬಹುಶಃ ಆಕೆ ಅಥವಾ ಆತ ಧ್ಯಾನವನ್ನು ಕೈಗೆತ್ತಿಕೊಳ್ಳಬೇಕು. ಧ್ಯಾನ ಯಾವಾಗಲೂ ಸಹಾಯ ಮಾಡುತ್ತದೆ. ಚೈತನ್ಯಗಳು ವ್ಯಕ್ತಿಗೆ ಶಿಕ್ಷಣವನ್ನೂ ನೀಡುತ್ತವೆ. ಅವು ಆ ವ್ಯಕ್ತಿಯೊಂದಿಗೆ ಒಂದು ಆಳವಾದ ಮಟ್ಟದಲ್ಲಿ ಮಾತನಾಡಿ, ಆ ನಿರ್ದಿಷ್ಟವಾದ ಸಮಸ್ಯೆ ಯಾವ ಕಾರಣಕ್ಕಾಗಿ ಆಗಿರಬಹುದೆಂದು ತಿಳಿಸುತ್ತವೆ. ತನ್ನಲ್ಲಿ ಬದಲಾವಣೆ ಮಾಡಿಕೊಳ್ಳಲು ಅವನಿಗೆ ಹೇಳುತ್ತವೆ. ಬಹುಶಃ ಆತನಿಗೆ ಆಧ್ಯಾತ್ಮಿಕ ಅಭ್ಯಾಸಗಳನ್ನು ಕೈಗೊಳ್ಳಲು ಹೇಳಬಹುದು. ಆ ವ್ಯಕ್ತಿಯು ಸಕಾರಾತ್ಮಕವಾಗಿ ಸ್ಪಂದಿಸಿದರೆ, ಆಗ ಹೀಲಿಂಗ್ ಶೀಘ್ರವಾಗಿ ಆಗುತ್ತದೆ. ಆ ವ್ಯಕ್ತಿಯು ತಾನೇ ಸ್ವತಃ ಸಾಧನೆಯನ್ನು ಕೈಗೆತ್ತಿಕೊಂಡರೆ, ನಿಜವಾದ ಹೀಲಿಂಗ್ ಆಗುತ್ತದೆ. ಸಾಧನೆಯನ್ನಲ್ಲದಿದ್ದರೂ, ಅವರು ಕನಿಷ್ಠ ತನ್ನನ್ನು ತಾನು ಸಕಾರಾತ್ಮಕವಾಗಿ ಪರಿವರ್ತಿಸಿಕೊಳ್ಳುವ ಪ್ರಯತ್ನ ಮಾಡಬೇಕು.

ಹೀಲಿಂಗ್ ಚೈತನ್ಯಗಳಿಂದ, ಕೆಲವು ಕರ್ಮಗಳು ಬಿಡುಗಡೆಯಾಗುತ್ತವೆ. ಅದನ್ನು ಋಷಿಗಳು ತಮ್ಮದೇ ಆದ ರೀತಿಯಲ್ಲಿ ಮಾಡುತ್ತಾರೆ. ಇದು ಉಪಶಮನ ನೀಡಲು ಅಗತ್ಯ. ಹೀಲಿಂಗ್ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವವರು, ಆ ವ್ಯಕ್ತಿಯ ಕರ್ಮದ ಒಂದು ಭಾಗವನ್ನು ಪಡೆಯಬೇಕಾಗುತ್ತದೆ. ಇದು ಒಂದು ಸಣ್ಣ ಭಾಗ ಮತ್ತು ನಾವು ಧ್ಯಾನ ಮಾಡಿ ಈ ಭಾಗವನ್ನು ಬಿಡುಗಡೆ ಮಾಡಬಹುದು. ಆದುದರಿಂದಲೇ, ನೀವು ಹೀಲಿಂಗ್ ಮಾಡುವುದಾದರೆ, ನಿಯತವಾಗಿ ಧ್ಯಾನ ಮಾಡಬೇಕು ಎಂದು ನಾವು ಹೇಳುವುದು. ವ್ಯಕ್ತಿಯು ಆಯ್ಕೆ ಮಾಡಿಕೊಂಡಾಗ ಮತ್ತು ಆಧ್ಯಾತ್ಮಿಕವಾಗಿ ಬೆಳೆಯಲು ನಿರ್ಧಾರ ಮಾಡಿದಾಗ, ಅದೇ ಆತನ ಕರ್ಮಗಳನ್ನು ಕಳೆಯಲು ಸಹಾಯ ಮಾಡುತ್ತದೆ. ನಿರಂತರ ಪ್ರಯತ್ನದಿಂದ, ವ್ಯಕ್ತಿಯು ಸ್ವತಃ ಸಂಪೂರ್ಣವಾಗಿ ಹೀಲ್ ಮಾಡಿಕೊಳ್ಳಬಹುದು.

ಹೀಲಿಂಗ್ ಚೈತನ್ಯಗಳನ್ನು ಕಳುಹಿಸುವ ಮೂಲಕ ನಾವು ಸಾವನ್ನು ತಡೆಯಬಹುದೆ? ಹೀಲಿಂಗ್ ಚೈತನ್ಯಗಳನ್ನು ಕಳುಹಿಸುವ ಮೂಲಕ, ವ್ಯಕ್ತಿಯೊಬ್ಬನು ಸಂಪೂರ್ಣವಾಗಿ ಗುಣಹೊಂದುವುದನ್ನು ನಾವು ಖಾತ್ರಿ ಮಾಡಿಕೊಳ್ಳಬಹುದೆ? ಇದು ಸಾಧ್ಯವಿಲ್ಲ. ಆದರೆ, ಅದರ ಅರ್ಥ ಹೀಲಿಂಗ್ ಪರಿಣಾಮಕಾರಿಯಲ್ಲ ಎಂದಲ್ಲ. ಅದರ ಅರ್ಥ ನಾವು ಅಸಮರ್ಥರೆಂದಲ್ಲ. ಇಲ್ಲಿ ಬೇರೆ ವಾಸ್ತವಗಳಿವೆ. ನಾವು ಸಾವನ್ನು ತಡೆಯಲು ಆಗುವುದಿಲ್ಲ. ನಮಗೆ ವ್ಯಕ್ತಿಯನ್ನು ಸಂಪೂರ್ಣವಾಗಿ ಗುಣಪಡಿಸಲು ಆಗದಿದ್ದರೆ, ನಾವು ಹೀಲ್ ಮಾಡುವುದಾದರೂ ಏಕೆ? ನಾವು ಹೀಲ್ ಮಾಡಬೇಕು, ಏಕೆಂದರೆ ಅದು ಉಪಶಮನ ನೀಡುತ್ತದೆ ಮತ್ತು ವ್ಯಕ್ತಿಗೆ ನಿರ್ದೇಶನ ನೀಡುತ್ತದೆ. ಹಲವಾರು ಸಂದರ್ಭಗಳಲ್ಲಿ, ಸಾವಿನ ಸಮಯ ಬಂದಾಗ, ಈ ಹೀಲಿಂಗ್ ಚೈತನ್ಯಗಳು ಆ ವ್ಯಕ್ತಿಗೆ, ಆತ್ಮಕ್ಕೆ, ಭಯವಿಲ್ಲದೆ, ಯಾವುದೇ ಹೋರಾಟವಿಲ್ಲದೆ ಶರೀರವನ್ನು ಸುಲಭವಾಗಿ ತೊರೆಯಲು ಸಹಾಯ ಮಾಡುತ್ತವೆ.

ನಮ್ಮ ವೈಯಕ್ತಿಕ ಹೀಲಿಂಗ್‌ಗೆ, ಧ್ಯಾನವು ಸಾಕು ಎಂದು ಹೇಳಿದ್ದಾರೆ. ಧ್ಯಾನವು ಕೇವಲ ನಮ್ಮನ್ನು ಮಾತ್ರ ಹೀಲ್ ಮಾಡುವುದಿಲ್ಲ, ನಮ್ಮ ಸಂಪರ್ಕಕ್ಕೆ ಬರುವ ಎಲ್ಲರನ್ನೂ ಹೀಲ್ ಮಾಡುತ್ತದೆ. ಇದು ಒಂದು ಬಹಳ ಸುಂದರವಾದ ಅಂಶ.

ಗುರೂಜಿಯವರು ನಮಗೆ ಕೊಟ್ಟ ಒಂದು ತಂತ್ರವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಈ ತಂತ್ರವನ್ನು ಸ್ವಯಂ ಹೀಲಿಂಗ್‌ಗೆ ಉಪಯೋಗಿಸಬಹುದು ಹಾಗೂ ನಿಮ್ಮ ಆಪ್ತರನ್ನು ಹೀಲ್ ಮಾಡಲೂ ಉಪಯೋಗಿಸಬಹುದು. ಮತ್ತೊಮ್ಮೆ, ಇಂದಿನ ಇಡೀ ತರಗತಿಯಲ್ಲಿ ನಾವು ಅರ್ಥ ಮಾಡಿಕೊಂಡಂತೆ, ಗೊತ್ತು ಗುರಿಯಿಲ್ಲದೆ ಎಲ್ಲರಿಗೂ ಹೀಲ್ ಮಾಡುವುದು ಬೇಡ. ನಾವು ಬೆಳಕಿನ ಒಂದು ಸಾಗರವನ್ನು ಊಹೆ ಮಾಡಿಕೊಳ್ಳಬೇಕು. ನಂತರ, ನಮ್ಮನ್ನು ಹೀಲ್ ಮಾಡಲು ಆ ಬೆಳಕನ್ನು ಪ್ರಾರ್ಥಿಸಬೇಕು. ನಂತರ, ಈ ಬೆಳಕಿನ ಸಾಗರದಿಂದ ಬೆಳಕನ್ನು ತೆಗೆದುಕೊಳ್ಳಬೇಕು. ಆ ಬೆಳಕು ನಮ್ಮ ಶರೀರವನ್ನು, ನಮ್ಮ ದೇಹವನ್ನು ಪ್ರವೇಶಿಸಲಿ ಮತ್ತು ದೇಹ, ಮನಸ್ಸು ಮತ್ತು ಬುದ್ಧಿಯನ್ನೊಳಗೊಂಡ ನಮ್ಮ ಶಾರೀರಿಕ ವ್ಯವಸ್ಥೆಯ ಪ್ರತಿ ಕಣದಲ್ಲೂ ಈ ಬೆಳಕನ್ನು ಅನುಭವಿಸೋಣ. ನಮ್ಮ ಶಾರೀರಿಕ ವ್ಯವಸ್ಥೆಯು ಸಂಪೂರ್ಣವಾಗಿ ಈ ಬೆಳಕಿನಿಂದ ತುಂಬಿದೆ ಎಂದು ಊಹಿಸಿಕೊಳ್ಳಿ. ನಂತರ, ನಾವು ಗುಣವಾಗುತ್ತಿದ್ದೇವೆ ಎಂಬ ಒಂದು ಬಲವಾದ ಆಲೋಚನೆ, ಒಂದು ದೃಢೀಕರಣ ಮಾಡಿಕೊಳ್ಳಬೇಕು. ಹೀಲಿಂಗ್ ಬೇಕಾಗಿರುವ ನಮ್ಮ ಶರೀರದ ಭಾಗವು ಹೀಲಿಂಗ್ ಪಡೆಯುತ್ತಿದೆ. ಈ ರೀತಿ ಇದನ್ನು 7 ಬಾರಿ ಮಾಡಬೇಕು. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫೀಯು ರೂ. 4500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಜ್ಞಾನದ ಅನ್ವೇಷಣೆ

**ಕಾರ್ತಿಕ್ ಎನ್; ಅನು: ಕಾಂಚನಲತಾ**

ಕೆಲ ಸಮಯದ ಹಿಂದೆ, ನಡೆದಾಡುತ್ತಾ, ನನ್ನ ಗೆಳೆಯರೊಬ್ಬರೊಂದಿಗೆ ದೂರವಾಣಿಯಲ್ಲಿ ಸಂಭಾಷಿಸುತ್ತಿದ್ದೆ. ಅಧ್ಯಾತ್ಮಿಕತೆ ಮತ್ತು ಕರ್ಮಗಳ ಕುರಿತಾಗಿ ಚರ್ಚೆ ಮಾಡುತ್ತಿದ್ದೆವು. ಹಲವಾರು ವರ್ಷಗಳಲ್ಲಿ, ಆತ ಪುರಾತನ ಮತ್ತು ಆಧುನಿಕ ಮಾಸ್ಟರ್‌ಗಳ ಪುಸ್ತಕಗಳನ್ನು ಓದಿದ್ದರು. ಅವರು ಅರ್ಥ ಮಾಡಿಕೊಂಡಿದ್ದನ್ನು ನನಗೆ ವಿವರಿಸಿದರು. ಅವರು ಗೊಂದಲಗೊಂಡಿರುವುದನ್ನು ಮತ್ತು ಆ ವಿಷಯಗಳ ಬಗ್ಗೆ ಹೆಚ್ಚು ಪ್ರಶ್ನೆಗಳು ಹುಟ್ಟಿರುವುದನ್ನು ಒಪ್ಪಿಕೊಂಡರು. ಅವರ ಗೊಂದಲವನ್ನು ಕಡಿಮೆಮಾಡುವ ಭರವಸೆಯಿಂದ, "ಆತ್ಮದ ಅವರೋಹಣ" ಪುಸ್ತಕದ ಸಾರವನ್ನು ಸುಮಾರು 10 ನಿಮಿಷಗಳಲ್ಲಿ ಹಂಚಿಕೊಂಡೆ. ಅವರು ಎಚ್ಚರಿಕೆಯಿಂದ ಕೇಳಿಸಿಕೊಂಡರು. ನಾನು ಪರಿಚಯಪಡಿಸಿದ ಜ್ಞಾನದಲ್ಲಿರುವ ಸ್ಪಷ್ಟತೆಯನ್ನು ಗ್ರಹಿಸಿದ ಅವರು ಅವಾಕ್ಕಾದರು! "ವಿಸ್ತಾರವಾದ ಮತ್ತು ಕ್ಲಿಷ್ಟವಾದ ಪರಿಕಲ್ಪನೆಗಳನ್ನು ಇಷ್ಟು ಸರಳವಾದ ಶಬ್ದಗಳಲ್ಲಿ, ಅದರಲ್ಲೂ ಇಷ್ಟು ಕಡಿಮೆ ಸಮಯದಲ್ಲಿ ವಿವರಿಸಲು ನಿಮಗೆ ಹೇಗೆ ಸಾಧ್ಯವಾಯಿತು?!" ಎಂದು ಅವರು ದೂರವಾಣಿಯ ಇನ್ನೊಂದು ಕೊನೆಯಿಂದ ಜೋರಾಗಿ ಉದ್ಗಾರ ಮಾಡಿದರು. ಅವರು ಇನ್ನೂ ಹೆಚ್ಚು ತಿಳಿಯಬಯಸಿದರು!

ಮಹರ್ಷಿ ಅಮರರವರು ಕೆಳಗೆ ತಂದಿರುವ, ಸರಳವಾದ ಆದರೂ ಗಾಢವಾದ ಜ್ಞಾನದಿಂದ, ಅಲ್ಪಾವಧಿಯ ಕಾಲ್ನಡಿಗೆಯ ಸುತ್ತಾಟದ ಸಮಯದಲ್ಲಿ ನಡೆದ ಒಂದು ಸಾಧಾರಣ ಸಂಭಾಷಣೆಯಲ್ಲಿ, ವ್ಯಕ್ತಿಯೊಬ್ಬರಲ್ಲಿ ವರ್ಷಾನುವರ್ಷಗಳಿಂದ ಇದ್ದ ಗೊಂದಲಗಳನ್ನು ನಿವಾರಿಸಲು ಸಾಧ್ಯವಾಗಿತ್ತು! ಅಮರರವರು ಉನ್ನತ ಜ್ಞಾನದ ಗೂಢಾರ್ಥಗಳನ್ನು ಅರ್ಥೈಸಿಕೊಂಡು ಅದನ್ನು ಸರಳವಾದ ಪದಗಳಲ್ಲಿ ಮಂಡಿಸುವುದರಲ್ಲಿ ಪ್ರವೀಣರಾಗಿದ್ದರು.

ನನ್ನ ಸ್ನೇಹಿತರ ಜ್ಞಾನದ ಅನ್ವೇಷಣೆಯ ಬಗ್ಗೆ ಪರ್ಯಾಲೋಚಿಸುತ್ತಾ, ನಾನು ಕೂಡ ಒಂದು ಸಮಾನ ರೀತಿಯ ಅನ್ವೇಷಣೆಯನ್ನು ಹಂಚಿಕೊಂಡಿದ್ದರ ಅರಿವು ಮೂಡಿತು. ವಾಸ್ತವದಲ್ಲಿ, ಅದು ನಮ್ಮೆಲ್ಲರೊಳಗೂ ಇದೆ! ಏನೇ ಆಗಲಿ, ನಮ್ಮ ಮಾರ್ಗದಲ್ಲಿರುವ ಧ್ಯಾನಿಗಳಿಗೆ, ಅಮರ ಮತ್ತು ಗುರೂಜಿಯವರಿಂದ ಸಮೃದ್ಧ ಜ್ಞಾನವು ಚಿಮ್ಮಿ ಬಂದು, ನಮ್ಮ ದಾಹವನ್ನು ಸುಲಭವಾಗಿ ತಣಿಸಿತು.

ಜೀವನದ ಅರ್ಥ ಮತ್ತು ಉದ್ದೇಶಗಳನ್ನು ಅರಸುತ್ತಾ, ಮಾನವಕುಲವು ಉನ್ನತ ಜ್ಞಾನದ ಅನ್ವೇಷಣೆಯಲ್ಲಿ ಸಹಸ್ರಮಾನಗಳನ್ನು ಕಳೆದಿದೆ. ಜ್ಞಾನವು ಅವಶ್ಯಕ, ಆದ್ದರಿಂದಲೇ ಋಷಿಗಳು ಅಷ್ಟೊಂದನ್ನು ಸಂಗ್ರಹಿಸಿದ್ದಾರೆ ಮತ್ತು ತಲೆಮಾರುಗಳಿಂದ ನಮಗೆ ರವಾನಿಸುತ್ತಿದ್ದಾರೆ. ನಮ್ಮ ಮಾರ್ಗದಲ್ಲಿರುವ ಧ್ಯಾನಿಗಳು ಈ ಪ್ರಮುಖ ಅಂಶವನ್ನು ಅರ್ಥ ಮಾಡಿಕೊಂಡಿದ್ದಾರೆ.

ಅಮರರವರು ನಮ್ಮ ಬುದ್ಧಿಯ ಮಿತಿಗಳ ಬಗ್ಗೆ ಎಚ್ಚರಿಸಿದ್ದರು. ಅವರು ನಮ್ಮ ಆಂತರಿಕ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಸತ್ಯವನ್ನು ನೇರವಾಗಿ ಗ್ರಹಿಸಲು ಸದಾ ಉತ್ತೇಜಿಸುತ್ತಿದ್ದರು. ಇದಕ್ಕಾಗಿಯೇ ಅವರು ನಮಗೆ ಧ್ಯಾನವೆಂಬ ಶಕ್ತಿಯುತವಾದ ಸಾಧನವನ್ನು ಕಲಿಸಿಕೊಟ್ಟರು. ಜ್ಞಾನವನ್ನು ನೇರವಾಗಿ ಪಡೆಯುವುದು ಹೇಗೆ ಮತ್ತು ಅದನ್ನು ನಮ್ಮದಾಗಿಸಿಕೊಳ್ಳುವುದು ಹೇಗೆ ಎಂಬುದನ್ನು ಕಲಿಸಿಕೊಟ್ಟರು.

ನಾವು ಸತ್ಯ ಯುಗದ ಆಳಕ್ಕೆ ಹೋಗುತ್ತಿರುವುದರಿಂದಾಗಿ, ಈ ಮಾರ್ಗದಲ್ಲಿರುವ ನಮ್ಮೆಲ್ಲರೊಳಗೂ ಈ ಅನ್ವೇಷಣೆಯು, ಒಂದು ಗುಪ್ತಗಾಮಿನಿಯ ಹಾಗೆ ಉಳಿಯಬೇಕು. ಉನ್ನತ ಜ್ಞಾನವು ವಿಮುಕ್ತಗೊಳಿಸುತ್ತದೆ. ■

## ವೃಕ್ಷ

**ಅಪೂರ್ವ ದೇಶ್‌ಪಾಂಡೆ; ಅನು: ಕಾಂಚನಲತಾ**

ನಾನು ಮಹರ್ಷಿ ಅಮರರವರ ಬಗ್ಗೆ ಯೋಚಿಸಿದಾಗ, ಭವ್ಯವಾದ, ನೂರಾರು ಎಕರೆಗಳಷ್ಟು ವ್ಯಾಪಿಸಿರುವ ವೃಕ್ಷದ ಬಗ್ಗೆ ಯೋಚಿಸುತ್ತೇನೆ.

ಒಂದು ಮರವು, ತನ್ನ ಬುಡದಲ್ಲಿ ಬೆಳೆಯುತ್ತಿರುವ ಎಳೆಯ ಸಸಿಗಳನ್ನು ರಕ್ಷಣೆ ಮಾಡುವಂತೆಯೇ, ಮಹರ್ಷಿ ಅಮರರವರು ನಮ್ಮನ್ನು ರಕ್ಷಣೆ ಮಾಡುತ್ತಾರೆ. ಅವರು ಒಮ್ಮೆಯೂ ನಮ್ಮ ಸೀಮೆಯನ್ನು ಉಲ್ಲಂಘಿಸದೆ, ನಮಗೆ ಸಮಯ ಮತ್ತು ಸ್ಥಳವನ್ನು ನೀಡುತ್ತಾರೆ. ಮಹರ್ಷಿ ಅಮರ ಎಂಬ ಈ ವೃಕ್ಷವು, ಸಸಿಗಳಾದ ನಮಗೆ, ನಾವು ನಿರೀಕ್ಷಿಸದೆಯೂ ಇರುವ ಸಮಸ್ಯೆಗಳನ್ನು ನಿವಾರಿಸುತ್ತಾ, ಮೌನವಾಗಿ ಸಹಾಯ ಮಾಡುತ್ತಿರುತ್ತಾರೆ. ಈ ಭವ್ಯವಾದ ವೃಕ್ಷದ ಸಹಾಯದಿಂದ ಸಸಿಗಳು ಹಸನಾಗಿ ಬೆಳೆಯಲು ಆರಂಭಿಸುತ್ತವೆ. ಆ ಭವ್ಯವಾದ ವೃಕ್ಷದಂತೆ, ಮಹರ್ಷಿ ಅಮರರವರು, ನಾವು ಶಕ್ತಿಯುತವಾಗಿ ಬೆಳೆಯಲು, ನಮಗೆ ಜ್ಞಾನದ ರೂಪದಲ್ಲಿ ಪೋಷಕಾಂಶಗಳನ್ನು ಒದಗಿಸುತ್ತಾರೆ. ನಾವು ಸ್ವಂತವಾಗಿ ಸಮೃದ್ಧಿಯಾಗಿ ಬೆಳೆಯಲು, ಅವರು ನಮ್ಮ ಬೇರುಗಳನ್ನು ಬಲಗೊಳಿಸಲು ಸಹಾಯ ಮಾಡುತ್ತಾರೆ.

ಆ ಶಕ್ತಿಯುತವಾದ ವೃಕ್ಷವು ತನ್ನ ಬುಡದಲ್ಲಿ ಬೆಳೆಯುತ್ತಿರುವ ಸಸಿಗಳಿಗೆ ಕಠಿಣ ಬೇಸಿಗೆಯ ಸೂರ್ಯನಿಂದ ರಕ್ಷಣೆ ಒದಗಿಸುತ್ತದೆ. ಮಹರ್ಷಿ ಅಮರರವರಿಗೆ ಕೇವಲ ನಮ್ಮ ಸಮಸ್ಯೆಗಳನ್ನು ಒಪ್ಪಿಸಿಕೊಡುವುದರಿಂದ, ನಮ್ಮ ಜೀವನದ ಅನೇಕ ಅಹಿತಕರ ಸಂದರ್ಭಗಳ ಹೊಡೆತಗಳಿಂದ ರಕ್ಷಣೆ ಪಡೆದ ಘಳಿಗೆಗಳು ಹೇರಳವಾಗಿವೆ. ಅದು ಹೇಗಿರುತ್ತದೆಂದರೆ, ಆ ಹೊಡೆತಗಳನ್ನು ನಮಗಾಗಿ ಮೃದುಗೊಳಿಸಿರುತ್ತಾರೆ ಅಥವಾ ಆ ಹೊಡೆತವನ್ನು ನಮಗಾಗಿ ಅವರೇ ಪಡೆದಿರುತ್ತಾರೆ ಮತ್ತು ಕೇವಲ ಅದರ ಒಂದು ಭಾಗವನ್ನು ಮಾತ್ರ ನಮಗೆ ರವಾನಿಸಿರುತ್ತಾರೆ.

ದುರ್ಬಲವಾದ ಕಾಂಡವು ಬದುಕುಳಿಯಲು ಮತ್ತು ಹಠಾತ್ತಾಗಿ ಬೀಸುವ ಬಲವಾದ ಗಾಳಿಯಿಂದ ಮುರಿಯದಂತೆ ಆ ವೃಕ್ಷವು ಆಸರೆ ನೀಡುತ್ತದೆ. ಈ ಭವ್ಯವಾದ ವೃಕ್ಷವು ಸಸಿಗಳನ್ನು ಬೆಳೆಯಲು ಉತ್ತೇಜಿಸುತ್ತದೆ. ಅದು ಸಸಿಗಳಿಗೆ ತಮಗೆ ಬೇಕಾದ ಮಾರ್ಗದಲ್ಲಿ ಹೋಗುವುದನ್ನು ಆಯ್ಕೆ ಮಾಡಿಕೊಳ್ಳಲು ಸ್ವಾತಂತ್ರ್ಯ ನೀಡುತ್ತದೆ. ಅಲ್ಲಿ ಯಾವುದೇ ರೀತಿಯ ಕಡಿವಾಣವಿರುವುದಿಲ್ಲ. ಅಲ್ಲಿ ಕೇವಲ ಸ್ವಾತಂತ್ರ್ಯ ಮತ್ತು ಬೇಷರತ್ತಿನ ಪ್ರೀತಿ ಇರುತ್ತದೆ. ಆ ಭವ್ಯವಾದ ಮರವು ಸಸಿಗಳು ತಮ್ಮದೇ ರೀತಿಯಲ್ಲಿ ಅತ್ಯುತ್ತಮವಾಗಿ ಏಳಿಗೆ ಹೊಂದುವುದನ್ನು ಬಯಸುತ್ತದೆ. ಅಲ್ಲಿ ಯಾವುದೇ ತೀರ್ಪು ಇರುವುದಿಲ್ಲ. ಆ ಭವ್ಯವಾದ ಮರವು ಕಾಯುತ್ತದೆ, ತಾನು ತಲುಪಿದ ಅಥವಾ ಅದನ್ನೂ ಮೀರಿದ ಎತ್ತರಕ್ಕೆ ಸಸಿಗಳು ತಲುಪಲು ತಾನು ಎಲ್ಲಾ ರೀತಿಯ ಬೆಂಬಲವನ್ನು ನೀಡುತ್ತದೆ ಮತ್ತು ಕಾಯುತ್ತದೆ. ಹಾಗೂ, ಸಸಿಗಳು ಬೆಳೆಯುವವರೆಗೂ, ಆ ಭವ್ಯವಾದ ವೃಕ್ಷವು ಸಸಿಗಳಿಗೆ ಆಶ್ರಯ ನೀಡಿ, ರಕ್ಷಣೆ ನೀಡುತ್ತದೆ ಮತ್ತು ಪ್ರೀತಿಯನ್ನು, ಪರಿಪೂರ್ಣ ಶುದ್ಧವಾದ ಪ್ರೀತಿಯನ್ನು ವರ್ಷಿಸುತ್ತದೆ. ■

## ಪ್ರಶ್ನೋತ್ತರಗಳು

ಜಯಂತ್ ದೇಶ್‌ಪಾಂಡೆ
ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ

**ಪ್ರ: ದುಷ್ಟ ಶಕ್ತಿಗಳು ಬೆಳಕನ್ನು ಬಳಸಿಕೊಳ್ಳಬಹುದೇ?**

ಉ: ನಾನು ಭಾವಿಸಿರುವಂತೆ, ಒಂದು ವೇಳೆ ದುಷ್ಟ ಶಕ್ತಿಗಳು ಬೆಳಕನ್ನು ಬಳಸಲಾರಂಭಿಸಿದರೆ, ಅವು ದುಷ್ಟ ಶಕ್ತಿಗಳಾಗಿಯೇ ಉಳಿಯಲು ಸಾಧ್ಯವಾಗುವುದಿಲ್ಲ. ಬೆಳಕು ದುಷ್ಟ ಶಕ್ತಿಗಳನ್ನು ಪರಿವರ್ತಿಸುತ್ತದೆ. ಬೆಳಕು ನಮಗೆ ಸಹಾಯ ಮಾಡುತ್ತಿದೆ. ಅದು, ನಾವು ಪರಿವರ್ತನೆಗೊಳ್ಳಲು ಸಹಾಯ ಮಾಡುತ್ತಿದೆ, ಅದು ದುಷ್ಟ ಶಕ್ತಿಗಳನ್ನೂ ಪರಿವರ್ತಿಸುತ್ತದೆ. ಬೆಳಕು ಅತ್ಯಂತ ಶಕ್ತಿಶಾಲಿ. ಉದ್ದೇಶ ಮುಖ್ಯವಾಗಿರುತ್ತದೆ. ನಾವು ಬೆಳಕನ್ನು ಬಳಕೆ ಮಾಡಿಕೊಳ್ಳುವ ಉದ್ದೇಶ ಏನು? ಒಂದು ವೇಳೆ ದುಷ್ಟ ಶಕ್ತಿಗಳು ಒಳ್ಳೆಯದೇನನ್ನಾದರೂ ಮಾಡಲು ಬಯಸಿ, ಬೆಳಕಿನ ಸಹಾಯ ಪಡೆಯಬಯಸಿದರೆ, ಬೆಳಕು ಸಂತೋಷದಿಂದ ಒಪ್ಪಿ ಅವುಗಳಿಗೆ ಸಹಾಯ ಮಾಡುತ್ತದೆಂದು ನನ್ನ ಅನಿಸಿಕೆ. ಆದರೆ ದುಷ್ಟ ಶಕ್ತಿಗಳು ಸಾಮಾನ್ಯವಾಗಿ ಒಳ್ಳೆಯದನ್ನು ಮಾಡುವುದಿಲ್ಲ. ಆ ಕಾರಣದಿಂದ ನಾವು ಅವುಗಳನ್ನು ದುಷ್ಟಶಕ್ತಿಯೆಂದು ಕರೆಯುತ್ತೇವೆ. ಅವು ಸಾಮಾನ್ಯವಾಗಿ ಸಕಾರಾತ್ಮಕವಲ್ಲದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತವೆ. ಸಾಮಾನ್ಯವಾಗಿ ಅವುಗಳ ಉದ್ದೇಶ, ಅಸಂತೋಷ, ಗೊಂದಲ, ಅಪ್ರೀತಿ, ಅನ್ಯಾಯ, ಕ್ರೂರತನ, ಇಂಥವುಗಳನ್ನು ಹರಡುವುದಾಗಿರುತ್ತದೆ. ಒಂದು ವೇಳೆ ಅವು, ಬೆಳಕನ್ನು ಬಳಸಿಕೊಂಡು ಅವುಗಳ ದುಷ್ಟ ಉದ್ದೇಶಗಳನ್ನು ಸಾಧಿಸಿಕೊಳ್ಳಬಯಸಿದರೆ, ಬೆಳಕು ಅವುಗಳಿಗೆ ಸಹಾಯ ಮಾಡುವುದಿಲ್ಲ.

**ಪ್ರ: ಕಾಸ್ಮಿಕ್ ಮನಸ್ಸು ಅಂದರೆ ಏನು?**

ಉ: ಇಂಥ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟ. ಕಾರಣ ಯಾವ ಸನ್ನಿವೇಶದಲ್ಲಿ 'ಕಾಸ್ಮಿಕ್ ಮನಸ್ಸು' ಎಂಬ ಪದವಿನ್ಯಾಸವನ್ನು ಬಳಸಲಾಗಿದೆ ಎಂದು ನಮಗೆ ತಿಳಿದಿಲ್ಲ. ಬ್ರಹ್ಮ ಲೋಕವು ಮನಸ್ಸಿನ ಸ್ತರ(plane) ಎಂದು ನಮಗೆ ಗೊತ್ತಿದೆ. ನಾವು ಈ ಬ್ರಹ್ಮ ಲೋಕದಿಂದಲೇ ನಮ್ಮ ಮನಸ್ಸನ್ನು ಪಡೆದಿದ್ದೇವೆ. ಬಹುಶಃ ನಾವು ಈ ಮನಸ್ಸಿನ ಸ್ತರವನ್ನೇ ಕಾಸ್ಮಿಕ್ ಮನಸ್ಸು ಎಂದು ಹೇಳಬಹುದು. ಈ ಸಮಯದಲ್ಲಿ, ಇಷ್ಟನ್ನು ಮಾತ್ರ ಅರ್ಥ ಮಾಡಿಕೊಂಡಿದ್ದೇನೆ. ನಮ್ಮ ವೈಯಕ್ತಿಕ ಮನಸ್ಸುಗಳು, ಈ ಮನಸ್ಸಿನ ಭಾಗವಾಗಿವೆ.

**ಪ್ರ: ನಮ್ಮ ಗಾಢವಾದ ಧ್ಯಾನದಲ್ಲಿ, ನಾವು ಈ ಕಾಸ್ಮಿಕ್ ಮನಸ್ಸನ್ನು ಸಹ ದಾಟಿ ಹೋಗುತ್ತೇವೆಯೇ?**

ಉ: ಹೌದು. ನಮ್ಮ ವೈಯಕ್ತಿಕ ಮತ್ತು ಕಾಸ್ಮಿಕ್ ಮನಸ್ಸನ್ನು ದಾಟಿ ಹೋಗುತ್ತೇವೆ. ನಮ್ಮ ಅರಿವು ಮನಸ್ಸಿನ ಆಚೆ ಹೋದಾಗ, ಕಾಸ್ಮಿಕ್ ಮನಸ್ಸನ್ನು ಕೂಡಾ ದಾಟಿ ಹೋಗಿದೆ ಎಂದು ಹೇಳಬಹುದು. ನಾವು ನಿಶ್ಚಲತೆಯ ಸ್ಥಿತಿಯನ್ನು ಸಾಧಿಸಿದಾಗ, ನಮ್ಮ ಅರಿವು ಎಲ್ಲವನ್ನು ಮೀರಿ ಹೋಗಿ, ದೇವರ ಇರುವಿಕೆಯ ಅನುಭವವನ್ನು ಪಡೆಯುತ್ತಿರುತ್ತೇವೆ.

**ಪ್ರ: ಮರಣವನ್ನು ಹೇಗೆ ಸುಲಭವಾಗಿ ತೆಗೆದುಕೊಳ್ಳಬಹುದು? ಇದರ ಅರ್ಥ ನಮಗೆ ಏನಾದರೂ ಸಂಭವಿಸಿದಾಗ ನಮ್ಮ ಜೀವವನ್ನು ರಕ್ಷಿಸಲು ದೇವರನ್ನು ಪ್ರಾರ್ಥಿಸುತ್ತೇವೆ. ಇಂತಹ ಸಂದರ್ಭಗಳಲ್ಲಿ ನಾವು ಹೇಗೆ ತಲ್ಲಣಕ್ಕೆ ಒಳಗಾಗದೇ ಶಾಂತಮನಸ್ಕರಾಗಿರಬಹುದು?**

ಉ: ನಾನು ಭಾವಿಸಿರುವಂತೆ ಇದು ಕಷ್ಟ. ನಾವು ದೇವರಲ್ಲಿ ಅಪಾರ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು. ನಮ್ಮ ಜೀವನದಲ್ಲಿ ಏನೇನು ಸಂಭವಿಸುವುದೋ, ಅದರ ಅರಿವು ದೇವರಿಗೆ ಇರುತ್ತದೆ ಎಂದು ನಾವು ತಿಳಿದಿರಬೇಕು. ದೇವರು ನಮ್ಮನ್ನು ಪ್ರೀತಿಸುತ್ತಾನೆ, ಹಾಗೇ ಈ ಘಟನೆಯು ನಮ್ಮಲ್ಲಿ ಸಂಭವಿಸುವುದಕ್ಕೆ ಅವಕಾಶ ಕೊಡುತ್ತಿದ್ದಾನೆ. ದೇವರಿಗೆ ನಮಗೆ ಯಾವುದು ಉತ್ತಮವೆಂದು ಗೊತ್ತಿದೆ. ಈ ಒಂದು ಅರಿವು ನಮಗೆ ಶಾಂತತೆಯಿಂದ ಇರಲು ಸಹಾಯ ಮಾಡುತ್ತದೆ. ಪ್ರಾರ್ಥಿಸುವುದು ತಪ್ಪಲ್ಲವೆಂದು ನನಗೆ ಅನಿಸುತ್ತದೆ. ನಾವು ಬದುಕಿರಬೇಕೆಂದು ಬಯಸುವುದು ಸಹಜ. ನಮ್ಮ ಜೀವನದ ಸುರಕ್ಷತೆಗೆ ನಾವು ಪ್ರಾರ್ಥಿಸಬಹುದು, ನಂತರ ಅದನ್ನು ದೇವರಿಗೆ ಬಿಟ್ಟು ಬಿಡಿ. ಅವನಿಗೆ ಯಾವುದು ಉತ್ತಮವೆಂದು ತಿಳಿದಿದೆ. ಇದು ಅಷ್ಟು ಸುಲಭವಲ್ಲ ಎಂದು ನಾನು ಹೇಳಲೇ ಬೇಕು. ಆದರೆ ಇದು ಸಾಧ್ಯವಿದೆ. ಸಂಪೂರ್ಣ ಶರಣಾಗತಿಯಲ್ಲಿ ಮಾಸ್ಟರ್‌ಗಳು ಆ ರೀತಿಯಲ್ಲಿ ಬದುಕಿದ್ದರು.


**ಪ್ರ: ನಮ್ಮ ಅತ್ಯಂತ ಪವಿತ್ರವಾದ ಕೆಲವು ನದಿಗಳು ಬಹಳ ಪರಿಶುದ್ಧವಾದ ಚೈತನ್ಯಗಳನ್ನು ಹೊಂದಿವೆ, ಹಾಗಿದ್ದರೂ ಆ ನದಿಗಳೇಕೆ ಕಲುಷಿತಗೊಂಡಿವೆ?**

ಉ: ಈ ನದಿಗಳು ಅದ್ಭುತವಾದ ಚೈತನ್ಯಗಳನ್ನು ಹೊಂದಿರುವುದು ಸತ್ಯ. ಈ ಚೈತನ್ಯಗಳು ನಮ್ಮನ್ನು ಶುದ್ಧೀಕರಿಸುತ್ತವೆ. ನಾವು ಗಂಗಾನದಿಯನ್ನು ಜ್ಞಾಪಿಸಿಕೊಂಡರೆ ಸಾಕು, ಗಂಗೆಯೊಂದಿಗೆ ಸಂಪರ್ಕ ಪಡೆದುಕೊಂಡು, ಪರಿಶುದ್ಧವಾದ ಚೈತನ್ಯಗಳನ್ನು ಪಡೆಯುತ್ತೇವೆ ಮತ್ತು ತಕ್ಷಣವೇ ನಮ್ಮನ್ನು ಶುದ್ಧೀಕರಿಸುತ್ತದೆಂದು ಗುರೂಜಿಯವರು ನಮಗೆ ಹೇಳುತ್ತಿದ್ದರು. ನಾವು ಸ್ನಾನ ಮಾಡುವ ಮೊದಲು, ಏಳು ಪವಿತ್ರ ನದಿಗಳನ್ನು ನೆನಪಿಸಿಕೊಳ್ಳಬಹುದು ಎಂದು ಅವರು ಹೇಳಿದ್ದರು. ನದಿಗಳ ಬಗ್ಗೆ ಸುಮ್ಮನೆ ಯೋಚಿಸಿದರೆ ಸಾಕು, ನಾವು ಅವುಗಳ ಜೊತೆಗೆ ಸಂಪರ್ಕ ಪಡೆದುಕೊಳ್ಳುತ್ತೇವೆ ಮತ್ತು ಸುಂದರವಾದ ಚೈತನ್ಯಗಳನ್ನು ಪಡೆಯುತ್ತೇವೆ. ಹಾಗಿರುವಾಗ, ಈ ನದಿಗಳು ಏಕೆ ಕಲುಷಿತಗೊಂಡಿವೆ? ಏಕೆಂದರೆ, ನಾವು ಮನುಷ್ಯರು ಈ ನದಿಗಳ ಪವಿತ್ರತೆಯನ್ನು ಗೌರವಿಸಲಿಲ್ಲ. ನದಿಯೆಂದರೆ ಅದು ಬರೀ ನೀರಲ್ಲ. ಅದು ಚೈತನ್ಯಗಳನ್ನು ಹೊಂದಿದೆ, ಸುಂದರವಾದ ಶುದ್ಧೀಕರಿಸುವ ಚೈತನ್ಯಗಳನ್ನು ಹೊಂದಿದೆ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 & 4 | each 200/- |
| Thus Spoke Guruji Krishnananda - Vol 2 & 3 | each 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KRNA/BGE/1124/ 2020-2022
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ತಪೋನಗರ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ. ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ಆಸ್ಪತ್ರೆಗೆ ದಾಖಲಾಗಿದ್ದು, ಸತತ ಒತ್ತಡದ ಸನ್ನಿವೇಶಗಳು ಮತ್ತು ಕೋವಿಡ್ ಸಾವಿನಂತಹ ಪ್ರತಿಕೂಲ ಪರಿಸ್ಥಿತಿಯು ಮನೆಯಲ್ಲಿ ಇದ್ದಾಗಲೂ ಕೂಡ ನನ್ನೊಳಗೆ ಶಾಂತಿಯಿತ್ತು, ಬೆಳಕನ್ನು ಹೊಂದಿರಲು ಸಾಧ್ಯವಾಯಿತು ಮತ್ತು ಬಹುತೇಕ ಸಮಯದಲ್ಲಿ ಬೆಳಕನ್ನು ಚಾನಲ್ ಮಾಡಿದೆ.

– ನಂದಿತಾ ಪಟೇಲ್

ಶಂಬಲ ನಿಯಮಗಳ ಅಭ್ಯಾಸವನ್ನು ನಾನು ಪ್ರಾರಂಭಿಸಿದಾಗ, ಮೂರನೆಯ ನಿಯಮವಾದ ಏಕತೆಯ ತಂತ್ರವನ್ನು ಅಭ್ಯಾಸ ಮಾಡುವುದು ನನಗೆ ಅತ್ಯಂತ ಸವಾಲಿನದಾಗಿತ್ತು. ನಮ್ಮ ಕುಟುಂಬದ ಸದಸ್ಯರು ಮತ್ತು ನಿಕಟ ಸ್ನೇಹಿತರನ್ನು ಹೊರತುಪಡಿಸಿ ಇತರರೊಂದಿಗೆ ಏಕತೆಯನ್ನು ಅನುಭವಿಸುವುದು ಕಷ್ಟದ ಕೆಲಸ. ನಮ್ಮ ಮಾರ್ಗದರ್ಶಕರ ಸಲಹೆಯಂತೆ ಅಭ್ಯಾಸವನ್ನು ಬಿಡದೆ ಮುಂದುವರಿಸಿದೆ ಮತ್ತು ಹೆಚ್ಚು ಪ್ರೀತಿಯನ್ನು ಸೇರಿಸಿದೆ. ಸ್ವಲ್ಪ ಸಮಯದ ನಂತರ ನನ್ನ ಭಾವನೆಗಳು ವಿಸ್ತರಿಸುತ್ತಿರುವ ಅನುಭವವಾಯಿತು ಮತ್ತು ಏಕತೆಯ ತಂತ್ರವು ನನ್ನ ಅಚ್ಚುಮೆಚ್ಚಿನ ಅಭ್ಯಾಸವಾಗಿ ಪರಿಣಮಿಸಿದೆ.

– ಸುಲೋಚನಾ ರಾಮಸ್ವಾಮಿ

ಬುದ್ಧ ಪೂರ್ಣಿಮೆಯ ರಾತ್ರಿ ಋಷಿಗಳನ್ನು ಪ್ರಾರ್ಥಿಸಿದೆ ಮತ್ತು ನನ್ನ ದೇಹದಲ್ಲಿ ಬೆಳಕನ್ನು ತುಂಬಿಕೊಂಡು ಮಲಗಿದೆ. ಮರುದಿನ ಎಚ್ಚರಗೊಂಡಾಗ ಒಂದು ಆಳವಾದ ನಿದ್ದೆಯಿಂದ ಎದ್ದಂತೆನಿಸಿತು. ಭೌತಿಕ ಪ್ರಪಂಚಕ್ಕೆ ಹೊಂದಿಕೊಳ್ಳಲು ಬಹಳ ಸಮಯ ಬೇಕಾಯಿತು. ರಾತ್ರಿಯ ಅನುಭವವನ್ನು ನೆನಪುಮಾಡಿಕೊಳ್ಳಲು ಪ್ರಯತ್ನಿಸಿದಾಗ ಅಸ್ಪಷ್ಟವಾಗಿ ಬುದ್ಧನ ಚಿತ್ರ ನನ್ನ ಕಣ್ಮುಂದೆ ಬಂದಿತು. ಅದು ಅತ್ಯಂತ ಪ್ರಕಾಶಮಾನವಾಗಿತ್ತು. ಕಾವೀ ವಸ್ತ್ರ ಧರಿಸಿದ್ದ ಬುದ್ಧ ತನ್ನ ಭೌತಿಕ ಶರೀರದಲ್ಲಿ ಧ್ಯಾನದಲ್ಲಿ ಕುಳಿತಿದ್ದರು. ಇದಕ್ಕಿಂತ ಹೆಚ್ಚಿನ ನೆನಪು ಬರಲಿಲ್ಲ.

– ಪುಂಡಲೀಕ ಧಾಕೋರ್‌ಕರ್

ಧ್ಯಾನದಲ್ಲಿ, ನನಗೆ ಹೆಚ್ಚು ಕಾಲ ಬೆಳಕಿನ ಅನುಭವ ಆಗುತ್ತದೆ ಮತ್ತು ಅದು ತೀವ್ರವಾಗಿರುತ್ತದೆ. ಎಲ್ಲ ಸಮಯದಲ್ಲೂ ಬೆಳಕಿನ ಅರಿವಿನಿಂದಿರಲು ಬಹಳ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ನನ್ನ ಜೀವನದ ಪ್ರತಿ ಹಂತದಲ್ಲೂ ಸರಿಯಾದ ಆಯ್ಕೆಗಳನ್ನು ಮಾಡಿಕೊಳ್ಳಲು ಬೆಳಕು ಸಹಾಯ ಮಾಡುತ್ತಿದೆ. ನಿಮ್ಮೆಲ್ಲರಿಗೂ ನಾನು ಮನಃಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ.

– ಸೌರಭ್ ಜೋಶಿ

ಏಪ್ರಿಲ್ ತಿಂಗಳಿನ ಎರಡನೇ ವಾರದಲ್ಲಿ, ನಾನು ಎಂದಿನಂತೆ ತೋಟದಲ್ಲಿ ಕುಳಿತಿದ್ದಾಗ, ಒಂದು ಮರವನ್ನು ನೋಡುತ್ತಾ ಅದೇಕೆ ಬರಡಾಗಿದೆಯೆಂದು ಆಶ್ಚರ್ಯಪಟ್ಟೆ. ಆ ಮರದಲ್ಲಿ ಒಂದೂ ಎಲೆಯಿರಲಿಲ್ಲ. ನಾನು ಆ ಮರಕ್ಕೆ ಮತ್ತು ಪಕ್ಕದಲ್ಲೇ ಇದ್ದ ಸುಗಂಧರಾಜ ಸಸಿಗೆ ಬೆಳಕನ್ನು ಕಳುಹಿಸಲು ಆರಂಭಿಸಿದೆ. ಮರದಲ್ಲಿ ಎಲೆ ಬರುವಂತೆ ಹಾಗು ಸುಗಂಧರಾಜ ಸಸಿ ಚೆನ್ನಾಗಿ ಬೆಳೆಯುವಂತೆ ಪ್ರಾರ್ಥಿಸಿದೆ. ಸೋಜಿಗವೆಂಬಂತೆ ಏಪ್ರಿಲ್ 20ರ ವೇಳೆಗೇ ಆ ಮರದಲ್ಲಿ ಪೂರ್ಣ ಪ್ರಮಾಣದಲ್ಲಿ ಹಸಿರು ಎಲೆಗಳು ಕಂಡುಬಂದವು!

– ನಿಖಿಲ್ ಗಾಂಧಿ

ಓರಿಯಂಟೇಶನ್ ತರಗತಿ ತಪ್ಪಿಹೋಗುತ್ತದೆಯೋ ಎಂದು ಹಿಂದಿನ ರಾತ್ರಿ ನನಗೆ ಚಿಂತೆಯಾಯಿತು. ನನಗೆ ಜ್ವರ ಇತ್ತು, ಬೆಳಿಗ್ಗೆ ತಡವಾಗಿ ಎದ್ದು ತರಗತಿ ಎಲ್ಲಿ ತಪ್ಪುತ್ತದೋ ಎಂಬ ಚಿಂತೆಯಿಂದ ರಾತ್ರಿಯೆಲ್ಲಾ ಅನೇಕ ಬಾರಿ ಎಚ್ಚರಗೊಳ್ಳುತ್ತಿದ್ದೆ. ಆದರೆ ಬೇಗನೆ ಎದ್ದು ತರಗತಿಗೆ ಹಾಜರಾದೆ. ನಂತರ, ಹಿಂದಿನ ದಿನದ ಅನಾರೋಗ್ಯದ ಅರಿವೇ ಇಲ್ಲದೆ, ಸಂಪೂರ್ಣ ಆರೋಗ್ಯದಿಂದ ಮತ್ತು ಶಾಂತಿಯಿಂದ ಇಡೀ ದಿನ ಕೆಲಸ ಮಾಡಿದೆ. ಅಂದು ಶ್ರೀ ದೇಶಪಾಂಡೆ ಅವರು ಪ್ರಕಾಶವಮಾನವಾಗಿ ಹೊಳೆಯುತ್ತಿದ್ದಂತೆ ಕಂಡುಬಂತು. ಬೇರೆ ಶಕ್ತಿಗಳು ತರಗತಿಯನ್ನು ತಡೆಯಲು ಪ್ರಯತ್ನಿಸುತ್ತಿದ್ದಂತೆ ಋಷಿಗಳು ಒಳ ಬಂದರು ಎಂದು ಅನಿಸಿತು. ಆಗ ತರಗತಿ ಮತ್ತಷ್ಟು ವಿಶೇಷತೆಯಿಂದ ಕೂಡಿತು. ನನ್ನ ವೈಯಕ್ತಿಕ ಮಟ್ಟದಲ್ಲಿ ಬೆಳಕು ಮತ್ತು ದುಷ್ಟ ಶಕ್ತಿಗಳ ನಡುವಿನ ಹೋರಾಟ ತೀವ್ರವಾಯಿತು. ತರಗತಿಯಲ್ಲಿ ಕೊಟ್ಟ ತಂತ್ರಗಳು ಈ ಹೋರಾಟದಲ್ಲಿ ಸಹಾಯಮಾಡುವಲ್ಲಿ ಮುಖ್ಯಪಾತ್ರ ವಹಿಸಿದವು. ಅದು ನಮಗೆ ಋಷಿಗಳಿಂದ ಬಂದ ವೈಯುಕ್ತಿಕ ಸಂದೇಶದಂತಿತ್ತು. ಅವರುಗಳಿಗೆ ನಾನು ಅತ್ಯಂತ ಕೃತಜ್ಞಳಾಗಿದ್ದೇನೆ.

– ಗಾಯತ್ರಿ ಭಾಟಿಯ

ನನ್ನ ಜೀವನದಲ್ಲಿ ಇತ್ತೀಚೆಗೆ ಅತ್ಯಂತ ಕಠಿಣ ಅನುಭವವನ್ನು ಎದುರಿಸಬೇಕಾಯಿತು. ಇದರಿಂದ ನನ್ನ ಹೃದಯ ಒಡೆದಂತಾಗಿ ಅತ್ಯಂತ ವೇದನೆ ಮತ್ತು ನೋವಿನಿಂದ ಬಳಲಿದೆ. ನನ್ನ ಮನಸ್ಸು ನಿಶ್ಶಬ್ದಗೊಂಡಿತು, ನಾನು ನಿಶ್ಚಲನಾದೆ. ಆ ಸಮಯದಲ್ಲಿ ಒಂದು ಆಳವಾದ ಅನುಭವವಾಯಿತು. ಹಿಂದೆಂದೂ ಆಗಿರದಂತೆ, ನನ್ನ ಹೃದಯ ತೆರೆದುಕೊಂಡು ಪ್ರೀತಿಯ ಅನುಭವವಾಯಿತು. ಪ್ರಯತ್ನವಿಲ್ಲದೇ ಪ್ರೀತಿ ಹರಿಯಿತು. ಅದು ನನ್ನ ಸುತ್ತಮುತ್ತಲಿನವರಿಗೆ, ಜೀವಿಗಳಿಗೆ, ನಿರ್ಜೀವಿಗಳಿಗೆ ಹಾಗೂ ಇಡೀ ಸೃಷ್ಟಿಗೆ ಹರಡಿತು. ಆ ಪ್ರೀತಿಗೆ ಮುಗ್ಧ ಮಗುವಿನ ಗುಣವಿತ್ತು. ಆ ಪ್ರೀತಿಯನ್ನು ಅನುಭವಿಸುತ್ತಿದ್ದಾಗ, ನನ್ನ ಬದುಕಿನಲ್ಲಿ ಅನೇಕ ಅಹಿತಕರ ಘಟನೆಗಳು ಮತ್ತು ಜನರು ಇದ್ದರೂ ಕೂಡ, ಕೋಪಗೊಳ್ಳುವುದಾಗಲೀ, ಯಾವುದೇ ನಕಾರಾತ್ಮಕತೆಯನ್ನು ಹೊಂದಿರುವುದಾಗಲೀ ಸಾಧ್ಯವಾಗಲಿಲ್ಲ. ಎಲ್ಲವನ್ನೂ ಮರೆತು ಎಲ್ಲರನ್ನೂ ಪ್ರೀತಿಸಿದೆ.

– ಒಬ್ಬ ಸಾಧಕ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ